ಸ್ವಯಂಬೋಧಿನೀ ಗ್ರಂಥಮಾಲಾ

ಸಂಸ್ಕೃತಪ್ರವೇಶಃ



ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣಭಾರತೀ

ಬರೆದವರು

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಪ್ರಕಾಶಕರು

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ – 573 211

ದೂರವಾಣಿ: 08175–273211

www.adhyatmaprakasha.org

ಕೆಲವು ಸಂಸ್ಕೃತಗ್ರಂಥಗಳು

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಸಂಸ್ಕೃತ ಗ್ರಂಥಾವಳಿಗಳು ಮತ್ತು ಮಾಸಪತ್ರಿಕೆಯ ಲೇಖನಗಳ ರೂಪದಲ್ಲಿ ಸಂಸ್ಕೃತಭಾಷಾಭ್ಯಾಸಕ್ಕೆ ಅಪರಿಮಿತವಾದ ಸಾಹಿತ್ಯವನ್ನು ಪರಮಕರುಣೆಯಿಂದ ಕನ್ನಡಿಗರಿಗೆ ನೀಡಿದ್ದಾರೆ. ಚತುರ್ವಿಧ ಪುರುಷಾರ್ಥವೂ, ಬಾಳಿಗೆ ಬೆಳಕಾಗುವ ಮಹಾತ್ಮರ ಚರಿತ್ರೆಯೂ ಈ ಭಾಷೆಯಲ್ಲಿರುವದು ಒಂದು ವೈಶಿಷ್ಟ್ಯ. ಇದರ ಪರಿಚಯಕ್ಕಾಗಿ **ಸ್ವಯಂಬೋಧಿನೀ ಗ್ರಂಥಮಾಲಾ** ಮತ್ತು **ಸಂಸ್ಕೃತಭಾಷಾಭ್ಯಾಸ ಗ್ರಂಥಮಾಲಾ** ಎಂಬ ಎರಡು ಗ್ರಂಥಸರಣಿಗಳನ್ನು ಶ್ರೀಶ್ರೀಗಳವರು ನಾಡಿನ ಜನತೆಗೆ ನೀಡಿದ್ದಾರೆ. ಸಂಸ್ಕೃತವನ್ನು ಯಾವ ಆಯಾಸವೂ ಇಲ್ಲದೆ ಸುಲಭವಾಗಿ ಕಲಿಯುವದಕ್ಕೆಂದು ಈ ಗ್ರಂಥಾವಳಿಯನ್ನು ಏರ್ಪಡಿಸಿದೆ. ಕನ್ನಡಭಾಷೆಯ ಪರಿಚಯವಿರುವವರಿಗೆಲ್ಲ ಇದು ಅತ್ಯುತ್ತಮಸಾಧನವಾಗಿರುತ್ತದೆ.

ಸ್ವಯಂಬೋಧಿನೀ ಗ್ರಂಥಮಾಲಾ

1. ಸಂಸ್ಕೃತಪ್ರವೇಶಃ

ಈ ಪ್ರವೇಶಪುಸ್ತಕದಲ್ಲಿ ಪ್ರತಿಯೊಂದು ಪಾಠದಲ್ಲಿಯೂ ಇರುವ ಮಾತುಗಳಿಗೆ ಕೆಳಗೆ ಅದೇ ಕ್ರಮದಲ್ಲಿ ಪೂರಾ ಅರ್ಥವನ್ನು ಕೊಟ್ಟಿರುತ್ತದೆಯಾದ್ದರಿಂದ ಗ್ರಂಥವು ಉಪಾಧ್ಯಾಯರ ಸಹಾಯವಿಲ್ಲದೆಯೇ ಓದುವವರಿಗೂ ಅನುಕೂಲವಾಗುವಂತಿದೆ; ಆದರೆ ಉಪಾಧ್ಯಾಯರಿದ್ದರೆ ಪಾಠವು ಬೇಗ ಸಾಗುವದು. ಕೆಲವು ಶಬ್ದಗಳೂ ವಾಕ್ಯಗಳೂ ಬಂದಮೇಲೆಯೇ ವ್ಯಾಕರಣವನ್ನು ವಿದ್ಯಾರ್ಥಿಗಳು ಕಲಿಯುವದೇ ಸರಿಯಾದ ದಾರಿಯೆಂಬ ಅಭಿಪ್ರಾಯದಿಂದ ಈ ಪಾಠಾವಳಿಯನ್ನು ಬರೆದಿರುತ್ತದೆ. ಆದ್ದರಿಂದ ಇಲ್ಲಿ ವ್ಯಾಕರಣದ ನಿಯಮಗಳನ್ನು ಹೆಚ್ಚಾಗಿ ತಗಲಿಸಿಲ್ಲ; ವಿಷಯದ ಕಡೆಗೇ ಲಕ್ಷ್ಯವಿಟ್ಟು ಮಾತುಗಳನ್ನು ಜೋಡಿಸಿರುತ್ತದೆ; ಮತ್ತೆ ಮತ್ತೆ ಅಭ್ಯಾಸದಿಂದ ಶಬ್ದರೂಪಗಳು ಅನಾಯಾಸವಾಗಿ ಓದುವವರ ಮನಸ್ಸಿನಲ್ಲಿ ನೆಡುವಂತೆ ಏರ್ಪಡಿಸಿರುತ್ತದೆ. **ಈಗ ಇದು ನಿಮ್ಮ ಕೈಯಲ್ಲಿದೆ.** **(ಎರಡನೆಯ ಮುದ್ರಣ: 2011) ಕ್ರೌನ್ 1/8 ಪು. 61**

2. ಸಂಸ್ಕೃತಪ್ರಥಮಪುಸ್ತಕಮ್

ಇಲ್ಲಿ ಪಾಠದ ಅಡಿಯಲ್ಲಿ ಮುಖ್ಯವಾದ ಸಂಧಿಗಳನ್ನು ಬಿಡಿಸಿ ತೋರಿಸಿರುತ್ತದೆ; ಇದರ ಜೊತೆಗೆ ವಾಕ್ಯಗಳ ಅನ್ವಯವನ್ನು ಕೊಟ್ಟಿರುತ್ತದೆ. ವರ್ಣನೆ, ಸಂಭಾಷಣೆ, ಕಥೆ, ಕಾಗದ ಬರೆಯುವಿಕೆ – ಈ ರೂಪದಲ್ಲಿ ಪಾಠಗಳನ್ನು ಕೊಟ್ಟಿರುತ್ತದೆ. ಅಲ್ಲಲ್ಲಿಗೆ ಕೆಲವು ಸುಲಭವಾದ ಪದ್ಯಗಳನ್ನೂ ಜೋಡಿಸಿರುತ್ತದೆ. ಮುಖ್ಯವಾದ ಶಬ್ದಗಳ ರೂಪಾವಳಿ–ಯನ್ನೂ ಈ ಪುಸ್ತಕದಲ್ಲಿ ಬರುವ ಕ್ರಿಯಾಪದಗಳ ರೂಪಾವಳಿಯನ್ನೂ ಪುಸ್ತಕದ ಕೊನೆಯಲ್ಲಿ ಕೊಟ್ಟಿರುತ್ತದೆ. **(ಮೂರನೆಯ ಮುದ್ರಣ: 2000) ಡೆಮ್ಮಿ 1/8 ಪು. 102**

(ರಕ್ಷಾಕವಚದ 3ನೆ ಪುಟದಲ್ಲಿ ಮುಂದುವರೆದಿದೆ...)

ಸಂಸ್ಕೃತಪ್ರವೇಶಃ

ತಾವೇ ಸಂಸ್ಕೃತವನ್ನು ಕಲಿಯಬೇಕೆಂಬವರಿಗೂ ಅನುಕೂಲಿಸುವಂತೆ
ಹೊಸಮಾದರಿಯಲ್ಲಿ ಬರೆದಿರುವ ಸಂಸ್ಕೃತ ಬಾಲಬೋಧೆ

ಲೇಖಕರು

ಸಂಸ್ಕೃತ ಪ್ರಥಮಪುಸ್ತಕ, ವಾಕ್ಯರಚನಾಕ್ರಮ, ಪದತ್ರಯ, ಮುಂತಾದ
ಗ್ರಂಥಗಳನ್ನು ಬರೆದಿರುವ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು

(ಪೂರ್ವಾಶ್ರಮದ ವೈ. ಸುಬ್ಬರಾವ್)

ಕ್ರಮಾಂಕ: 246

ಪ್ರಕಾಶಕರು

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573211

ದೂ: 08175-273211

www.adhyatmaprakasha.org

2011

Samskruta Pravesha: Written by *Sri Sri Sacchidanandendra Saraswathi Swamiji* (Poorvashrama *Y. Subbarao*) — Published by Adhyatma Prakasha Karyalaya, Public Charitable Trust. Holenarasipura-573 211 (INDIA).
Phone: 08175-273 211
www.adhyatmaprakasha.org

I Edition: ಮೊದಲನೆಯ ಮುದ್ರಣ 1927 – 500 copies
II Edition: ಎರಡನೆಯ ಮುದ್ರಣ 2011 – 2000 copies

ಪುಟಗಳು: **10 + 51**

ಬೆಲೆ: ₹ 25/-

ಇದರ ಹಕ್ಕುಗಳೆಲ್ಲವೂ ಕಾರ್ಯಾಲಯದ್ದು
All Rights Reserved

ಅಕ್ಷರ ಜೋಡಣೆ:
ಶ್ರೀರಂಗ ಡಿಜಿಟಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈ. ಲಿ.
ಜೈನಬಸದಿ ಹಿಂಬಾಗ, ೪ನೇ ಕ್ರಾಸ್,
ರಂಗನಾಥ ನಗರ
ಶ್ರೀರಂಗಪಟ್ಟಣ - 571 438 ದೂ: 08236-292432

ಮುದ್ರಣಕಾರರು:
ಗಾಯತ್ರಿ ಪ್ರಿಂಟ್ಸ್
#೨೩೨/೪, ೪ನೇ ಮುಖ್ಯ ರಸ್ತೆ,
ಶ್ರೀನಿವಾಸನಗರ,
ಬೆಂಗಳೂರು - 560 050 ದೂ: 080-2669 9367

ಪೀಠಿಕೆ

ಸಂಸ್ಕೃತವು ಭರತಖಂಡದ ಜನರೆಲ್ಲರಿಗೂ ಆದರಣೀಯವಾದ ಭಾಷೆ. ಇದರಲ್ಲಿ ನಮ್ಮ ಪೂರ್ವಮಹರ್ಷಿಗಳ ಮತ್ತು ಅವತಾರಪುರುಷರ ಇತಿ-ಹಾಸವೂ ನಮಗೆ ಬೇಕಾಗಿರುವ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಫಲಗಳ ವಿಚಾರಗಳೂ ಅಡಕವಾಗಿರುವವು. ಹಿಂದಿ, ಕನ್ನಡ - ಮುಂತಾದ ಪ್ರಾಂತಿಕಭಾಷೆಗಳಿಗೆಲ್ಲ ಮಾತೃಪ್ರಾಯವಾಗಿದ್ದು ಶಬ್ದಕೋಶ-ವನ್ನೂ ವಿಷಯಸಂಪತ್ತನ್ನೂ ಒದಗಿಸಿಕೊಡುವ ಅಕ್ಷಯ ನಿಧಿಯೆಂದರೆ ಸಂಸ್ಕೃತವೇ. ಹೀಗಿರುವುದರಿಂದ ನಮ್ಮ ದೇಶದ ಸಂಸ್ಕೃತಿಯನ್ನು ತಿಳಿ-ಯಲಿಚ್ಛಿಸುವ ಪರದೇಶದವರು ಕೂಡ ಸಂಸ್ಕೃತವನ್ನೇ ಅಭ್ಯಾಸಮಾಡಿ, ಈ ಭಾಷೆಯ ಗ್ರಂಥಗಳನ್ನೇ ಓದಿ ನಲಿದು, ತಮ್ಮ ದೇಶಭಾಷೆಗಳಿಗೂ ಪರಿವರ್ತನೆ ಮಾಡಿಕೊಳ್ಳುತ್ತಿರುವರು.

ಹೀಗೆ ಸ್ವಭಾವದಿಂದಲೇ ಪೂಜ್ಯವಾಗಿರುವ ಈ ಭಾಷೆಯನ್ನು ದೇಶ ಭಕ್ತರೂ ಪ್ರಾಚೀನಸಂಸ್ಕೃತಿಯ ಅಭಿಮಾನಿಗಳೂ ಅವಶ್ಯವಾಗಿ ಗೌರವಿಸ-ಬೇಕಷ್ಟೆ. ಆದರೆ ಈ ಭಾಷೆಯನ್ನು ಸುಲಭವಾಗಿ ಕಲಿಯುವುದಕ್ಕೆ ಅನು-ಕೂಲಿಸುವ ಪಾಠಾವಳಿಯೊಂದನ್ನು ನಿರ್ಮಿಸಿದ ಹೊರತು ಸಾಮಾನ್ಯ ಜನ-ರಿಗೆ ಇದರಲ್ಲಿ ಪ್ರವೇಶವಾಗುವ ಹಾಗಿಲ್ಲ. ಇದನ್ನರಿತು ಸಂಸ್ಕೃತವನ್ನು ಓದುವವರಿಗೆ ರುಚಿ ಹುಟ್ಟುವ ಹಾಗೆ ವ್ಯಾವಹಾರಿಕವಿಷಯಗಳನ್ನೊಳ-ಗೊಂಡ ಪಾಠಾವಳಿಯನ್ನು ಭರತಖಂಡದ ಉಳಿದ ಪ್ರಾಂತಿಕಭಾಷೆಯ-ವರು ಏರ್ಪಡಿಸಿಕೊಳ್ಳುತ್ತಿರುವರು. ಇಂಥ ಸೌಕರ್ಯವು ಕನ್ನಡಿಗರಿಗೂ ಇರಬೇಕೆಂಬುದೇ ಪ್ರಕೃತ ಗ್ರಂಥಾವಳಿಯ ಉದ್ದೇಶವು. ಬೇರೆ ಬೇರೆ ಪ್ರಾಂತ್ಯಗಳಲ್ಲಿ ಪ್ರಚಾರದಲ್ಲಿರುವ ಬಾಲಬೋಧೆಗಳನ್ನು ನೋಡಿ

ಗುಣಾಂಶವನ್ನು ಸ್ವೀಕರಿಸಿ ಒಂದು ಹೊಸ ಪದ್ಧತಿಯನ್ನು ಅನುಸರಿಸಿ ಈ ಗ್ರಂಥವನ್ನು ಏರ್ಪಡಿಸಿರುತ್ತೇನೆ.

ಕೆಲವು ಶಬ್ದಗಳೂ ವಾಕ್ಯಗಳೂ ಬಂದ ಮೇಲೆಯೇ ವ್ಯಾಕರಣವನ್ನು ವಿದ್ಯಾರ್ಥಿಗಳು ಕಲಿಯುವುದೇ ಸರಿಯಾದ ದಾರಿಯೆಂಬ ಅಭಿಪ್ರಾಯ-ದಿಂದ ಈ ಪಾಠಾವಳಿಯನ್ನು ಬರೆದಿರುತ್ತದೆ. ಆದ್ದರಿಂದ ಇಲ್ಲಿ ವ್ಯಾಕರಣದ ನಿಯಮಗಳನ್ನು ಹೆಚ್ಚಾಗಿ ತಗಲಿಸಿಲ್ಲ; ವಿಷಯದ ಕಡೆಗೇ ಲಕ್ಷ್ಯವಿಟ್ಟು ಮಾತುಗಳನ್ನು ಜೋಡಿಸಿರುತ್ತದೆ; ಮತ್ತೆ ಮತ್ತೆ ಅಭ್ಯಾಸದಿಂದ ಶಬ್ದರೂಪಗಳು ಅನಾಯಾಸವಾಗಿ ಓದುವವರ ಮನಸ್ಸಿನಲ್ಲಿ ನೆಡುವಂತೆ ಏರ್ಪಡಿಸಿರುತ್ತದೆ.

ಈ ಪ್ರವೇಶಪುಸ್ತಕದಲ್ಲಿ ಪ್ರತಿಯೊಂದು ಪಾಠದಲ್ಲಿಯೂ ಇರುವ ಮಾತುಗಳಿಗೆ ಕೆಳಗೆ ಅದೇ ಕ್ರಮದಲ್ಲಿ ಪೂರಾ ಅರ್ಥವನ್ನು ಕೊಟ್ಟಿರುತ್ತದೆ-ಯಾದ್ದರಿಂದ ಗ್ರಂಥವು ಉಪಾಧ್ಯಾಯರ ಸಹಾಯವಿಲ್ಲದೆಯೇ ಓದು-ವವರಿಗೂ ಅನುಕೂಲವಾಗುವಂತಿದೆ; ಆದರೆ ಉಪಾಧ್ಯಾಯರಿದ್ದರೆ ಪಾಠವು ಬೇಗ ಸಾಗುವುದು. ಪಾಠಶಾಲೆಯಲ್ಲಿ ಓದುವಾಗ ಯಾವು-ದಾದರೊಂದು ವಾಕ್ಯದ ಅರ್ಥವನ್ನು ಉಪಾಧ್ಯಾಯರು ಕೇಳಿದರೆ ಹುಡು-ಗರು ಕೆಳಗೆ ಅರ್ಥವನ್ನೇ ಥಟ್ಟನೆ ನೋಡದೆ ತಾವೇ ಯೋಚಿಸಿ ಹೇಳು-ವುದಕ್ಕೂ ಅನುಕೂಲವಿರಲಿ ಎಂಬುದರ ಮೇಲೆ ವಾಕ್ಯಗಳಿಗೆ ಸಂಖ್ಯೆ-ಯನ್ನು ಹಾಕಿಲ್ಲ.

ಉಪಾಧ್ಯಾಯರು ವಾಕ್ಯಗಳನ್ನು ಸುಮ್ಮನೆ ಓದಿಸಿ ಅರ್ಥಹೇಳುವು-ದರಿಂದಲೇ ತೃಪ್ತರಾಗದೆ (೧) ಹೊಸ ಸಂಸ್ಕೃತವಾಕ್ಯಗಳನ್ನು ಅದೇ ಮಾತುಗಳಿಂದ ಮಾಡಿ ಭಾಷಾಂತರಮಾಡಿಸುವದು. (೨) ಕನ್ನಡದಲ್ಲಿ ಕೆಲವು ವಾಕ್ಯಗಳನ್ನು ಕೊಟ್ಟು ಸಂಸ್ಕೃತಕ್ಕೆ ತಿರುಗಿಸಹೇಳುವದು. (೩) ಸಂಸ್ಕೃತದಲ್ಲಿ ಪ್ರಶ್ನೆಗಳನ್ನು ಹಾಕಿ ಉತ್ತರವನ್ನು ತೆಗೆದುಕೊಳ್ಳು-ವದು-ಮುಂತಾದ ಮಾರ್ಗಗಳಿಂದ ಬಾಲಕರ ಪ್ರಜ್ಞೆಯನ್ನು ಅಭಿವೃದ್ಧಿ-ಪಡಿಸಬಹುದಾಗಿದೆ. ಉದಾಹರಣೆಗೆ-ಹದಿನಾಲ್ಕನೆಯ ಪಾಠವಾದಮೇಲೆ

(೧) ಮಹಿಷ್ಯಃ ಕುತ್ರ ವರ್ತನ್ತೇ? ಕೋಽಯಂ ಕೋಲಾಹಲಃ? ಗರ್ದಭಾಶ್ಚೀತ್ಕುರ್ವನ್ತಿ ಕಿಂ? ಅಯಂ ಮಮಾಶ್ವಃ ಕಿಂ? ಕಸ್ಯಾಯಂ ಕುಕ್ಕುರಃ? ತ್ವಂ ಕುತ್ರ ಉಪವಿಶಸಿ? ಗುರುಃ ಕಿಂ ಪೃಚ್ಛತಿ? ಮುಂತಾದ ಸಂಸ್ಕೃತವಾಕ್ಯಗಳನ್ನು ಏರ್ಪಡಿಸಿ ಕನ್ನಡಿಸುವ ಹಾಗೆ ಹುಡುಗರಿಗೆ ಹೇಳಬಹುದು. (೨) ಇದು ಯಾರ ಅಂಗಿ? ನನ್ನ ರುಮ್ಮಾಲು ಎಲ್ಲಿದೆ? ಇದು ನನ್ನ ಕನ್ನಡಿಯೇನು? ಈ ನಾಯಿಗಳು ಯಾರವು? ಕತ್ತೆಗಳು ಏನುಮಾಡುತ್ತವೆ? ಮುಂತಾದ ವಾಕ್ಯಗಳನ್ನು ಕಲ್ಪಿಸಿ ಸಂಸ್ಕೃತಕ್ಕೆ ಪರಿವರ್ತನೆ ಮಾಡಿಸಬಹುದು. (೨) ಪಠ। ಲಿಖ। ತಿಷ್ಠ। ಉಪವಿಶ। ನಿರ್ಗಚ್ಛ—ಎಂದು ಆಜ್ಞೆಯನ್ನು ಕೊಟ್ಟು ಹುಡುಗರಿಂದ ಆಯಾ ಕೆಲಸ-ಗಳನ್ನು ಮಾಡಿಸಬಹುದು. (೪) ರಾಮಃ ಕಿಂ ಕರೋತಿ? ಸ ಲಿಖತಿ ಕಿಂ? ತ್ವಂ ಕಿಂ ಕರೋಷಿ? ಕಿಂ ಉಪವಿಶಸಿ? ಕಸ್ತಿಷ್ಠತಿ? ಕೋ ನಿರ್ಗಚ್ಛತಿ? ಎಂದು ಮುಂತಾಗಿ ಪ್ರಶ್ನೆಗಳನ್ನು ಹಾಕಿ ಅವರಿಂದ 'ರಾಮಃ ಪಠತಿ। ಸ ನ ಲಿಖತಿ। ಅಹಂ ತಿಷ್ಠಾಮಿ। ನಾಹಮುಪವಿಶಾಮಿ। ಕೃಷ್ಣಸ್ತಿಷ್ಠತಿ। ಗೋವಿಂದೋ ನಿರ್ಗಚ್ಛತಿ। ಎಂದು ಉತ್ತರಗಳನ್ನು ಪಡೆಯಬಹುದು.

ಪಾಠಗಳ ಕೆಳಗೂ ಗ್ರಂಥದ ಕೊನೆಯಲ್ಲಿರುವ ಶಬ್ದಕೋಶದಲ್ಲಿಯೂ ಕೊಟ್ಟಿರುವ ಸೂಚನೆಗಳು ವಯಸ್ಸಾಗಿರುವ ಸ್ವತಂತ್ರವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಪ್ರಯೋಜನಕ್ಕೆ ಬರುತ್ತವೆ. ಉಪಾಧ್ಯಾಯರು ಈ ಸೂಚನೆಯನ್ನು ಲಕ್ಷ್ಯದಲ್ಲಿಟ್ಟು ಹೊಸ ಅಭ್ಯಾಸಗಳನ್ನು ಏರ್ಪಡಿಸು-ತ್ತಿರಬೇಕು. ಸ್ವತಂತ್ರವಿದ್ಯಾರ್ಥಿಗಳು ಉಪಯೋಗಿಸುವದಕ್ಕಾಗಿ ಕೆಲವು ಅಭ್ಯಾಸಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ. ಇವುಗಳಲ್ಲಿರುವ ಮಾತು-ಗಳನ್ನೆಲ್ಲ ಪುಸ್ತಕದಲ್ಲಿ ಹಿಂದಿನ ಪಾಠಗಳಲ್ಲಿಯೇ ಕೊಟ್ಟಿರುತ್ತದೆ. ಇದು ತೀರ ಮೊದಲನೆಯ ಗ್ರಂಥವಾದ್ದರಿಂದ ಕಲಿಯುವವರಿಗೆ ಬೇಸರವಾ-ಗದೆ ಇರಲೆಂದು ಕೆಲವೇ ಶಬ್ದಗಳನ್ನು ಇಲ್ಲಿ ಸಂಗ್ರಹಿಸಿದೆ.

ಸಂಸ್ಕೃತದ ಅಕ್ಷರಗಳ ಪರಿಚಯವಾಗುವವರೆಗೆ ವಿದ್ಯಾರ್ಥಿಗಳು ಸುಮ್ಮನೆ ಕಾಲಹಾಕುವದು ಸಮನಲ್ಲವೆಂದು ಪಾಠಾವಳಿಯ ಈ ಪುಸ್ತಕ

ಮತ್ತು ಸಂಸ್ಕೃತ ಪ್ರಥಮ ಪುಸ್ತಕಂ ಎಂಬ ವೊದಲನೆಯ ಎರಡು ಪುಸ್ತಕಗಳನ್ನು ಕನ್ನಡದ ಅಕ್ಷರದಲ್ಲಿಯೇ ಬರೆದಿರುತ್ತದೆ. ನಡುನಡುವೆ ಅಕ್ಷರಾಭ್ಯಾಸವನ್ನೂ ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು.

ಈ ಪುಸ್ತಕವನ್ನೂ **"ಸಂಸ್ಕೃತಪ್ರಥಮಪುಸ್ತಕ"** ಎಂಬ ಇದರ ಮುಂದಿನ ಪುಸ್ತಕವನ್ನೂ ಏರ್ಪಡಿಸುವದರಲ್ಲಿ ಬೆಂಗಳೂರು **ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ವಿದ್ವಾಂಸರುಗಳು** ಅನೇಕರು ನನಗೆ ಬಹು ಉಪಯೋಗಕರವಾದ ಸೂಚನೆಗಳನ್ನು ಕೊಟ್ಟಿರುತ್ತಾರೆ. ಈ ಉಪಕಾರಕ್ಕಾಗಿ ಅವರಿಗೆಲ್ಲ ನಾನು ಕೃತಜ್ಞನಾಗಿರುವೆನು. ಈ ಜಾತಿಯ ಪುಸ್ತಕಾವಳಿಯನ್ನು ಬರೆಯುವದಕ್ಕೆ ಇದೇ ವೊದಲಾದ್ದರಿಂದ ನನ್ನ ದೃಷ್ಟಿಗೆ ಗೋಚರವಾಗದ ಸ್ಖಾಲಿತ್ಯಗಳು ಬಹಳ ಇರಬಹುದು. ಅವುಗಳನ್ನು ಕಂಡ ಮಹನೀಯರು ನನಗೆ ತಿಳಿಸಿದರೆ ಕೃತಜ್ಞತೆಯಿಂದ ಮುಂದಿನ ಸಂಸ್ಕರಣದಲ್ಲಿ ಅವನ್ನು ತಿದ್ದಿಕೊಳ್ಳುವೆನು.

ಪ್ರಭವ ಚೈತ್ರಶುದ್ಧ ೫. **ಗ್ರಂಥಕರ್ತ.**
ಚಾಮರಾಜಪೇಟೆ,
1927

ಎರಡನೆಯ ಸಂಸ್ಕರಣಕ್ಕೆ
ಪ್ರಕಾಶಕರ ಬಿನ್ನಹ

ನಮ್ಮ ಸನಾತನ ಭಾರತೀಯ ಸಂಸ್ಕೃತಿಯೆಲ್ಲಾ ಸಂಸ್ಕೃತ ಭಾಷೆಯಲ್ಲೇ ಇರುವಂಥದ್ದೆಂದು ಸಾರ್ವಜನಿಕ ವಿದಿತವಾದ ವಿಷಯವಷ್ಟೆ? ಆದರೆ ಇಂದು ಕಲಿವೈಭವದಿಂದ ಸಂಸ್ಕೃತವು ಕ್ಷೀಣಿಸುತ್ತಿರುವುದು ಬಹು ಶೋಚನೀಯವಾದ ಸಂಗತಿ. ಆದರೂ ಕೆಲವು ಮಹನೀಯರು ಈ ಭಾಷೆಯನ್ನು ಮತ್ತು ವಾಙ್ಮಯವನ್ನು ಹೇಗಾದರೂ ಉಳಿಸಬೇಕೆಂದು ಬಹು ಶ್ರಮವನ್ನು ಪಟ್ಟಿರುತ್ತಾರೆ. ಅವರಲ್ಲಿ ನಮ್ಮ ಶ್ರೀಶ್ರೀಗಳವರೂ ಸಹ ದೊಡ್ಡ ಸಂತ ಶ್ರೇಷ್ಠರು. ಅವರು ಈ ಭಾಷೆಯನ್ನು ಕಲಿಯುವು-ದಕ್ಕಾಗಿಯೇ ಐದು ಪುಸ್ತಕಗಳನ್ನು ಬರೆದಿರುತ್ತಾರೆ. ಶ್ರೀಗಳವರು ಸುಲಭವಾಗಿ ಸಂಸ್ಕೃತವನ್ನು ಕಲಿಯುವವರಿಗಾಗಿ ಪ್ರಕೃತಿಯ ವರ್ಣನೆ, ಸಂಭಾಷಣೆ, ಕಥೆ, ಕಾಗದ ಬರೆಯುವುದು, ಹಣ್ಣುಗಳ ಪರಿಚಯ ತರಕಾರಿಗಳ ಪರಿಚಯ, ಶರೀರಾವಯವಗಳ ಹೆಸರು, ಪ್ರಾಣಿಗಳ ಮತ್ತು ಪಕ್ಷಿಗಳ ಹೆಸರುಗಳು ಇತ್ಯಾದಿ ಅನೇಕ ಉಪಾಯಗಳಿಂದ ಸರಳ ಸುಂದರ ವಾಕ್ಯಗಳನ್ನು ಕೊಟ್ಟು ಅಭ್ಯಾಸವನ್ನು ಮಾಡುವ ಒಂದು ವಿಶೇಷ ಕ್ರಮವನ್ನು ತೋರಿಸಿ ಕೊಟ್ಟಿರುತ್ತಾರೆ. ಕೊನೆಯಲ್ಲಿ ಶಬ್ದಗಳ ಕೋಶ-ವನ್ನು ಕೊಟ್ಟು ಅನೇಕ ಪದಗಳ ಪರಿಚಯವನ್ನು ಮಾಡಿಕೊಳ್ಳುವ ವಿಧಾನವನ್ನು ತೋರಿಸಿ ಕೊಟ್ಟಿರುತ್ತಾರೆ.

ಸಂಸ್ಕೃತ ಪ್ರವೇಶಃ

ಶ್ರೀಗಳವರು ಒಟ್ಟು ಐದು ಪುಸ್ತಕಗಳನ್ನು ಬರೆದು ಅದರಲ್ಲಿ ಎರಡನ್ನು ಪ್ರಾಥಮಿಕ ಹಂತದವರ ಸಲುವಾಗಿ ಬರೆದಿರುತ್ತಾರೆ. ಉಳಿದ ಮೂರು ಪುಸ್ತಕಗಳನ್ನು ಭಾಷಾಭ್ಯಾಸ ಎಂಬ ಹೆಸರಿನಿಂದ ಬರೆದು ಕೊನೆಯದರಲ್ಲಿ ಪಂಚತಂತ್ರದ ಕಥೆಯ ನೆಪದಿಂದ ಸಂಪೂರ್ಣ ಭಾಷೆಯನ್ನೇ ಹಿಡಿತಕ್ಕೆ ತೆಗೆದುಕೊಳ್ಳುವ ವಿಧಾನವನ್ನು ತೋರಿಸಿಕೊಟ್ಟಿರುತ್ತಾರೆ. ಭಾಷಾಭ್ಯಾಸದ ಮೂರನೆಯ ಭಾಗವು ಪ್ರೌಢ ಸಂಸ್ಕೃತ ವಿದ್ಯಾರ್ಥಿಗಳಿಗಾಗಿ ಬರೆದಿದ್ದು ಅದರಲ್ಲಿ ಲಕಾರ(ಕ್ರಿಯಾಪದ) ರೂಪಗಳನ್ನೂ ಸಮಾಸ-ಕಾರಕಗಳನ್ನೂ ಅನಿಟ್‌ಕಾರಿಕೆಯನ್ನೂ ಅದರ ವಿವರಣೆಯನ್ನೂ ಬರೆದಿರುತ್ತಾರೆ. ಪಾಣಿನೀಯ ಸೂತ್ರಗಳನ್ನು ನೇರವಾಗಿ ಉದಾಹರಿಸದೇ ಅದರ ಅಭಿಪ್ರಾಯವನ್ನು ಪ್ರಯೋಗವನ್ನು ನಿಯಮಗಳನ್ನು ಸಹ ತುಂಬಾ ಚೆನ್ನಾಗಿ ಪ್ರತಿಪಾದನೆ ಮಾಡಿರುತ್ತಾರೆ.

ಸಂಸ್ಕೃತಾಭಿಮಾನಿಗಳು ಅವಶ್ಯವಾಗಿ ಈ ಐದು ಪುಸ್ತಕಗಳನ್ನೂ ಕೊಂಡುಕೊಂಡು ಇದರ ಪೂರ್ಣ ಪ್ರಯೋಜನವನ್ನು ಹೊಂದಬೇಕೆಂದು ನಾವು ಆಶಿಸುತ್ತೇವೆ. ನಿಮ್ಮ ಮಕ್ಕಳಿಗೂ ನಿಮ್ಮ ಸ್ನೇಹಿತ ವರ್ಗದವರಿಗೂ ಅವಶ್ಯವಾಗಿ ಇವುಗಳ ಪಾಠವನ್ನು ಹೇಳಿಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮಾಜದವರನ್ನು ಸಂಸ್ಕೃತಜ್ಞರನ್ನಾಗಿ ಮಾಡಬೇಕೆಂದು ನಾವು ಬಯಸುವೆವು. ದಯವಿಟ್ಟು ಇದರ ಪೂರ್ಣ ಪ್ರಯೋಜನವನ್ನು ಎಲ್ಲರೂ ಹೊಂದುವಂತಾಗಲಿ ಎಂದು ಆಶಿಸೋಣ.

ಖರ ಸಂವತ್ಸರ **ಪ್ರಕಾಶಕರು**
ಭಾದ್ರಪದ ಶುದ್ಧ ಸಪ್ತಮಿ
೦೪-೦೯-೨೦೧೧

|| संस्कृत ||

ಸಂಸ್ಕೃತ ವರ್ಣಮಾಲೆ.

अ	आ	इ	ई	उ	ऊ
ಅ	ಆ	ಇ	ಈ	ಉ	ಊ
ऋ	ॠ	ऌ	ॡ	ए	ऐ
ಋ	ೠ	ಌ	ೡ	ಏ	ಐ
ओ	औ	अं	अः		
ಓ	ಔ	ಅಂ	ಅಃ		

क	ख	ग	घ	ङ
ಕ	ಖ	ಗ	ಘ	ಙ
च	छ	ज	झ	ञ
ಚ	ಛ	ಜ	ಝ	ಞ
ट	ठ	ड	ढ	ण
ಟ	ಠ	ಡ	ಢ	ಣ

त	थ	द	ध	न
ತ	ಥ	ದ	ಧ	ನ
प	फ	ब	भ	म
ಪ	ಫ	ಬ	ಭ	ಮ
य	र	ल	व	
ಯ	ರ	ಲ	ವ	
श	ष	स	ह	ळ
ಶ	ಷ	ಸ	ಹ	ಳ
	क्ष	ज्ञ		
	ಕ್ಷ	ಜ್ಞ		

१	२	३	४	५	६	७	८	९	०
೧	೨	೩	೪	೫	೬	೭	೮	೯	೦

ಸಂಸ್ಕೃತ ಪ್ರವೇಶಃ

ಪ್ರಥಮಃ ಪಾಠಃ

ದೇವ, ನಮಸ್ತೇ[1] । ಸ್ವಾಮಿನ್, ಪ್ರಣಮಾಮಿ। ಅಮ್ಬ, ಅಭಿವಾದಯೇ। ತಾತ, ನಮಸ್ಕರೋಮಿ। ಆರ್ಯ,[2] ನಮೋ[1] ನಮಃ॥

ಒಂದನೆಯ ಪಾಠ

ದೇವನೆ, ನಿನಗೆ ನಮಸ್ಕಾರ. ಸ್ವಾಮಿ, ನಮಸ್ಕರಿಸುತ್ತೇನೆ. ಅಮ್ಮ, ನಮಸ್ಕರಿಸುತ್ತೇನೆ. ತಂದೆಯೆ, ನಮಸ್ಕರಿಸುತ್ತೇನೆ. ಪೂಜ್ಯನೆ, ನಮಸ್ಕಾರ ನಮಸ್ಕಾರ.

ದ್ವಿತೀಯಃ ಪಾಠಃ

ರಾಮಃ ಕಿಂ ಕರೋತಿ? ರಾಮಃ ಪಠತಿ। ಕೃಷ್ಣಃ ಕ್ರೀಡತಿ। ಗೋಪಾಲಃ ಪ್ರವಿಶತಿ। ಗೋವಿನ್ದಃ ಪಶ್ಯತಿ। ಪಾರ್ವತೀ[3] ಪೃಚ್ಛತಿ। ಶಿವಃ ಕಥಯತಿ॥

---

1. ನಮಃ+ತೇ, ನಮಃ+ನಮಃ. ಪಾಠಗಳಲ್ಲಿ ಸಂಧಿಮಾಡಿರುವ ಕಡೆಗಳಲ್ಲೆಲ್ಲ ಹೀಗೆ ಬಿಡಿಸಿ ತಿಳಿಸುತ್ತಾ ಹೋಗಿರುತ್ತದೆ. ವಾಕ್ಯಗಳಲ್ಲಿ ಸಂಧಿ ಅನಿತ್ಯವಾದ್ದರಿಂದ ಕೆಲವುಕಡೆ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಸಂಧಿ ಮಾಡದೆಯೇ ಬರೆದಿದೆ.

2. ಕನ್ನಡದಲ್ಲಿ ಮಾತಾಡುವಾಗ ಅಯ್ಯ, ಅಪ್ಪ, ಅಣ್ಣ ಎಂದು ಸಂಬೋಧಿಸುವಂತೆ ಸಂಸ್ಕೃತದಲ್ಲಿ ಗೌರವಕ್ಕಾಗಿ "ಆರ್ಯ" ಎಂದು ಸಂಬೋಧಿಸುತ್ತಾರೆ.

3. ಪೃಚ್ಛತಿ = ಕೇಳುತ್ತಾನೆ, ಕೇಳುತ್ತಾಳೆ, ಕೇಳುತ್ತದೆ. ಸಂಸ್ಕೃತದಲ್ಲಿ ಕ್ರಿಯಾಪದಗಳಿಗೆ ಲಿಂಗಭೇದವಿಲ್ಲ.

ಎರಡನೆಯ ಪಾಠ

ರಾಮನು ಏನು ಮಾಡುತ್ತಾನೆ? ರಾಮನು ಓದುತ್ತಾನೆ. ಕೃಷ್ಣನು ಆಡುತ್ತಾನೆ. ಗೋಪಾಲನು ಒಳಕ್ಕೆ ಬರುತ್ತಾನೆ. ಗೋವಿಂದನು ನೋಡುತ್ತಾನೆ. ಪಾರ್ವತಿಯು ಕೇಳುತ್ತಾಳೆ. ಶಿವನು ಹೇಳುತ್ತಾನೆ.

ತೃತೀಯಃ ಪಾಠಃ

ತ್ವಂ ಕಿಂ ಕರೋಷಿ? ಅಹಂ ಪಠಾಮಿ। ಅಹಂ ಕಿಂ ಕರೋಮಿ? ತ್ವಂ ಕ್ರೀಡಸಿ। ಅಸೌ[1] ಕಿಂ ಕರೋತಿ? (ಅಸೌ)[2] ಪ್ರವಿಶತಿ। ಅಯಂ ಕಿಂ ಕರೋತಿ? (ಅಯಂ) ಪಶ್ಯತಿ। ಕಃ ಪೃಚ್ಛತಿ? ತ್ವಂ ಪೃಚ್ಛಸಿ। ಕಃ ಕಥಯತಿ? ಅಹಂ ಕಥಯಾಮಿ॥

ಮೂರನೆಯ ಪಾಠ

ನೀನು ಏನು ಮಾಡುತ್ತೀಯೆ? ನಾನು ಓದುತ್ತೇನೆ. ನಾನು ಏನು ಮಾಡುತ್ತೇನೆ? ನೀನು ಆಡುತ್ತೀಯೆ. ಆತನು ಏನು ಮಾಡುತ್ತಾನೆ? (ಆತನು) ಒಳಕ್ಕೆ ಬರುತ್ತಾನೆ. ಇವನು ಏನು ಮಾಡುತ್ತಾನೆ? (ಇವನು)

---

1. ಸಂಸ್ಕೃತದಲ್ಲಿ ಎದುರಿಗಿರುವ ಪದಾರ್ಥಗಳನ್ನು ತೋರಿಸಿ ಮಾತಾಡುವದಕ್ಕೆ "ಇದಂ" "ಏತದ್" ಎಂದು ಎರಡು ಶಬ್ದಗಳುಂಟು. ಎದುರಿಗಿಲ್ಲದ ವಸ್ತುವನ್ನು ಕುರಿತು ಮಾತಾಡುವದಕ್ಕೆ "ತದ್" ಎಂಬ ಒಂದು ಶಬ್ದವಿರುವದು.

ಇದಮಸ್ತು ಸನ್ನಿಕೃಷ್ಟಂ ಸಮೀಪತರವರ್ತಿ ಚೈತದೋ ರೂಪಮ್।
ಅದಸಸ್ತು ವಿಪ್ರಕೃಷ್ಟಂ ತದಿತಿ ಪರೋಕ್ಷೇ ವಿಜಾನೀಯಾತ್॥

(ಇದಂ-ಎಂಬುದು ಹತ್ತಿರವಿರುವದನ್ನೂ ಏತದ್-ಎಂಬುದು ಇನ್ನೂ ಹತ್ತಿರವಿರುವ-ದನ್ನೂ ಅದಸ್-ಎಂಬುದು ದೂರವಿರುವದನ್ನೂ ತೋರಿಸುವದಕ್ಕೆ ಉಪಯೋಗಿಸುತ್ತವೆ.) ಅದಸ್ ಶಬ್ದಕ್ಕೆ ಈ ಸಂದರ್ಭದಲ್ಲಿ "ಅದು" ಎಂದು ಕನ್ನಡಿಸುವದೇ ಒಪ್ಪುವದು. ಎರಡುಮೂರು ಪದಾರ್ಥಗಳು ಇಲ್ಲದ ಕಡೆಯಲ್ಲಿ "ಇದು" ಎಂದು ಹೇಳಿದರೂ ಸಾಗುತ್ತದೆ. ಈ ಪುಸ್ತಕದಲ್ಲಿ ಅದಸ್-ಎಂಬುದಕ್ಕೆ ಅದು ಎಂದೇ ಬರೆದಿರುತ್ತದೆ.

2. ಈ ಮಾತನ್ನು ಬಿಟ್ಟರೂ ಆಗುತ್ತದೆ ಎಂದು ಸೂಚಿಸುವದಕ್ಕೆ ಕಂಸವನ್ನು ಹಾಕಿದೆ.

ನೋಡುತ್ತಾನೆ. ಯಾವನು ಕೇಳುತ್ತಾನೆ? ನೀನು ಕೇಳುತ್ತೀಯೆ. ಯಾವನು ಹೇಳುತ್ತಾನೆ? ನಾನು ಹೇಳುತ್ತೇನೆ.

ಚತುರ್ಥಃ ಪಾಠಃ

ಕೋ ಬಾಲಃ[1] ? ರಾಮೋ ಬಾಲಃ। ಕೋ ವೃದ್ಧಃ? ಶಿವೋ ವೃದ್ಧಃ। ಕಶ್ಛಾತ್ರಃ? ಅಯಂ ಛಾತ್ರಃ। ಕೋ ಗುರುಃ? ಅಸೌ ಗುರುಃ। ಕಃ ಪುರುಷಃ? ಶಿವಃ ಪುರುಷಃ। ಕಾ ಸ್ತ್ರೀ? ಪಾರ್ವತೀ ಸ್ತ್ರೀ॥

ನಾಲ್ಕನೆಯ ಪಾಠ

ಯಾವನು ಹುಡುಗನು? ರಾಮನು ಹುಡುಗನು. ಯಾವನು ಮುದುಕನು? ಶಿವನು ಮುದುಕನು. ಯಾವನು ವಿದ್ಯಾರ್ಥಿಯು? ಇವನು ವಿದ್ಯಾರ್ಥಿ. ಯಾವನು ಗುರುವು? ಆತನು ಗುರು. ಯಾವನು ಗಂಡಸು? ಶಿವನು ಗಂಡಸು. ಯಾವಳು ಹೆಂಗಸು? ಪಾರ್ವತಿ ಹೆಂಗಸು.

ಪಞ್ಚಮಃ ಪಾಠಃ

ಸಃ। ತೌ। ತೇ। ತ್ವಂ। ಯುವಾಂ। ಯೂಯಂ। ಅಹಂ। ಆವಾಂ। ವಯಂ। ಕೇಚಿತ್। ಸರ್ವೇ। ಇತರೇ। ಗಚ್ಛ। ಆಗಚ್ಛ। ಉಪವಿಶ। ಉತ್ತಿಷ್ಠ। ಲಿಖ। ಪಠ। ಧಾವ। ತಿಷ್ಠ। ಪಶ್ಯ॥

---

1. ಕಃ + ಬಾಲಃ. ರಾಮೋ ಬಾಲಃ ಮುಂತಾದದ್ದನ್ನೂ ಹೀಗೆಯೇ ಸಂಧಿ ಬಿಡಿಸಬೇಕು.

ಐದನೆಯ ಪಾಠ

ಅವನು. ಅವರಿಬ್ಬರು.[1] ಅವರು. ನೀನು. ನೀವಿಬ್ಬರು. ನೀವು. ನಾನು. ನಾವಿಬ್ಬರು. ನಾವು. ಕೆಲವರು. ಎಲ್ಲರೂ. ಉಳಿದವರು. ಹೋಗು. ಬಾ. ಕೂತುಕೊ. ಏಳು. ಬರೆ. ಓದು. ಓಡು. ನಿಲ್ಲು. ನೋಡು.

ಷಷ್ಠಃ ಪಾಠಃ

ರಾಮ, ಅತ್ರಾ[2] ಗಚ್ಛ। ರಾಮಃ ಕಿಂ ಕರೋತಿ? ಸ[3] ಆಗಚ್ಛತಿ। ಅತ್ರೋ[4] ಪವಿಶ। ಇದಾನೀಂ ರಾಮಃ ಕಿಂ ಕರೋತಿ? ಸ ಉಪವಿಶತಿ। ಉತ್ತಿಷ್ಠ। ರಾಮ ಉತ್ತಿಷ್ಠತಿ। ಇದಾನೀಂ ಗಚ್ಛ। ಸ ಕಿಂ ಕರೋತಿ? ಗಚ್ಛತಿ। ತತ್ರ ತಿಷ್ಠ। ಇದಾನೀಂ ಕಿಂ ಕರೋತಿ? ತಿಷ್ಠತಿ। ಗೋಪಾಲ, ತ್ವಮಾ[5] ಗಚ್ಛ। ಗೋಪಾಲಃ ಕಿಂ ಕರೋತಿ? ಸ ಆಗಚ್ಛತಿ॥

ಆರನೆಯ ಪಾಠ

ರಾಮನೆ, ಇಲ್ಲಿ ಬಾ. ರಾಮನು ಏನು ಮಾಡುತ್ತಾನೆ? ಅವನು ಬರುತ್ತಾನೆ. ಇಲ್ಲಿ ಕೂತುಕೋ. ಈಗ ರಾಮನು ಏನು ಮಾಡುತ್ತಾನೆ? ಅವನು ಕೂತುಕೊಳ್ಳುತ್ತಾನೆ. ಏಳು. ರಾಮನು ಏಳುತ್ತಾನೆ. ಈಗ ಹೋಗು. ಅವನು ಏನು ಮಾಡುತ್ತಾನೆ? ಹೋಗುತ್ತಾನೆ. ಅಲ್ಲಿ ನಿಲ್ಲು.

---

1. ಸಂಸ್ಕೃತದಲ್ಲಿ ಎರಡಕ್ಕೆ ದ್ವಿವಚನವನ್ನೂ ಎರಡಕ್ಕಿಂತ ಹೆಚ್ಚಿದ್ದರೆ ಬಹುವಚನವನ್ನೂ ಉಪಯೋಗಿಸುವರು. ದ್ವಿವಚನವಾದರೆ (ಕನ್ನಡದಲ್ಲಿ) ದ್ವಿವಚನಕ್ಕೆ ಬೇರೆ ರೂಪ ಇಲ್ಲದ್ದರಿಂದ (ಈ ಪುಸ್ತಕದಲ್ಲಿ) ಎರಡು ಎಂಬ ಮಾತನ್ನು ಸೇರಿಸಿರುತ್ತದೆ; ಇಲ್ಲದಿದ್ದರೆ ಎರಡಕ್ಕೆ ಹೆಚ್ಚೆಂದು ಭಾವಿಸಬೇಕು.
2. ಅತ್ರ+ಆಗಚ್ಛ
3. ಸಃ+ಆಗಚ್ಛತಿ
4. ಅತ್ರ+ಉಪವಿಶ
5. ತ್ವಂ+ಆಗಚ್ಛ

ಈಗ ಏನು ಮಾಡುತ್ತಾನೆ? ನಿಲ್ಲುತ್ತಾನೆ. ಗೋಪಾಲನೆ, ನೀನು ಬಾ. ಗೋಪಾಲನು ಏನು ಮಾಡುತ್ತಾನೆ? ಅವನು ಬರುತ್ತಾನೆ.

ಸಪ್ತಮಃ ಪಾಠಃ

ರಾಮಃ ಕಿಂ ಕರೋತಿ? ಸ ಪಠತಿ। ಲಕ್ಷ್ಮಣಶ್ಚ[1] ಶತ್ರುಘ್ನಶ್ಚ ಕಿಂ ಕುರುತಃ? ತೌ ಲಿಖತಃ। ಇತರೇ ಕಿಂ ಕುರ್ವನ್ತಿ? ತೇ ಪಶ್ಯನ್ತಿ। ಛಾತ್ರಾಃ ಕಿಂ ಕುರ್ವನ್ತಿ? ಅಧ್ಯಾಪಕಃ ಕಿಂ ಕರೋತಿ? ತೇ ಪೃಚ್ಛನ್ತಿ, ಸ ಕಥಯತಿ। ಬಾಲಕಾಃ ಕ್ರೀಡನ್ತಿ। ವೃದ್ಧಃ ಪಶ್ಯತಿ। ತೇ ತಿಷ್ಠನ್ತಿ। ಸ ಉಪವಿಶತಿ। ಬಾಲಕಾಃ ಕೇಚಿತ್ ಪ್ರವಿಶನ್ತಿ। ಕೇಚಿತ್ ತು ನಿರ್ಗಚ್ಛನ್ತಿ। ಕೇಚಿದ್ಗ[2] ಚ್ಛನ್ತಿ। ಕೇಚಿದಾಗಚ್ಛನ್ತಿ। ಕೇಚಿ[3] ದ್ಧಾವನ್ತಿ। ಕೇಚಿತ್ತಿಷ್ಠನ್ತಿ। ತೇ ಸರ್ವೇ ಕ್ರೀಡನ್ತಿ॥

ಏಳನೆಯ ಪಾಠ

ರಾಮನು ಏನು ಮಾಡುತ್ತಾನೆ? ಅವನು ಓದುತ್ತಾನೆ. ಲಕ್ಷ್ಮಣನೂ ಶತ್ರುಘ್ನನೂ ಏನು ಮಾಡುತ್ತಾರೆ? ಅವರಿಬ್ಬರೂ ಬರೆಯುತ್ತಾರೆ. ಉಳಿದವರು ಏನು ಮಾಡುತ್ತಾರೆ? ಅವರು ನೋಡುತ್ತಾರೆ. ವಿದ್ಯಾರ್ಥಿ-ಗಳು ಏನು ಮಾಡುತ್ತಾರೆ? ಉಪಾಧ್ಯಾಯನು ಏನು ಮಾಡುತ್ತಾನೆ? ಅವರು ಕೇಳುತ್ತಾರೆ, ಅವನು ಹೇಳುತ್ತಾನೆ. ಹುಡುಗರು ಆಡುತ್ತಾರೆ. ಮುದುಕನು ನೋಡುತ್ತಾನೆ. ಅವರು ನಿಂತಿದ್ದಾರೆ.[4] ಅವನು ಕೂತಿ-ದ್ದಾನೆ. ಹುಡುಗರು ಕೆಲವರು ಒಳಕ್ಕೆ ಬರುತ್ತಿದ್ದಾರೆ. ಆದರೆ ಕೆಲವರು

---

1. ಲಕ್ಷ್ಮಣಃ+ಚ ಚ=ಮತ್ತು
2. ಕೇಚಿತ್+ಗಚ್ಛನ್ತಿ
3. ಕೇಚಿತ್+ಧಾವನ್ತಿ
4. ನಡೆಯುತ್ತಿರುವ ಕ್ರಿಯೆಯನ್ನೂ ವರ್ತಮಾನ ಪ್ರತ್ಯಯವು ತಿಳಿಸುವುದು.

ಉದಾ: ಗಚ್ಛತಿ = ಹೋಗುತ್ತಾನೆ, ಹೋಗುತ್ತಿದ್ದಾನೆ.

ಹೊರಕ್ಕೆ ಹೋಗುತ್ತಿದ್ದಾರೆ. ಕೆಲವರು ಹೋಗುತ್ತಾರೆ. ಕೆಲವರು ಬರುತ್ತಾರೆ. ಕೆಲವರು ಓಡುತ್ತಾರೆ. ಕೆಲವರು ನಿಂತಿದ್ದಾರೆ. ಅವ-ರೆಲ್ಲರೂ ಆಡುತ್ತಾರೆ.

ಅಷ್ಟಮಃ ಪಾಠಃ

ರಾಮ, ಅತ್ರಾಗಚ್ಛ। ಲಕ್ಷ್ಮಣಃ ಕಿಂ ಕರೋತಿ? ಸ ಪಠತಿ। ತ್ವಂ ಕಿಂ ಕರೋಷಿ? ಅಹಮಪಿ ಪಠಾಮಿ। ಅಹಂ ಕಿಂ ಕರೋಮಿ? ತ್ವಂ ಲಿಖಸಿ। ಪಾರ್ವತೀ ಪಠತಿ ವಾ ಲಿಖತಿ ವಾ? ಸಾ ನ ಪಠತಿ, ನಾಪಿ ಲಿಖತಿ। ಸಾ ತೂಷ್ಣೀಮುಪವಿಶತಿ। ತ್ವಮಿದಾನೀಂ ಪಠಸಿ ಕಿಂ? ನ। ಅಹಮಿದಾನೀಂ ಲಿಖಾಮಿ। ತ್ವಂ ತು ಪಠಸಿ। ಗೋವಿನ್ದ, ಗೋಪಾಲ, ಯುವಾಂ ಕಿಂ ಕುರುಥಃ? ಆವಾಂ ತೂಷ್ಣೀಂ ತಿಷ್ಠಾವಃ। ಯೂಯಂ ಕಿಂ ಕುರುಥ? ವಯಂ ಸರ್ವೇ ಕ್ರೀಡಾಮಃ॥

ಎಂಟನೆಯ ಪಾಠ

ರಾಮನೆ, ಇಲ್ಲಿ ಬಾ. ಲಕ್ಷ್ಮಣನು ಏನು ಮಾಡುತ್ತಿದ್ದಾನೆ? ಅವನು ಓದುತ್ತಿದ್ದಾನೆ. ನೀನು ಏನು ಮಾಡುತ್ತಿದ್ದೀಯೆ? ನಾನೂ ಓದು-ತ್ತಿದ್ದೇನೆ. ನಾನು ಏನು ಮಾಡುತ್ತಿದ್ದೇನೆ? ನೀನು ಬರೆಯುತ್ತಿದ್ದೀಯೆ. ಪಾರ್ವತಿ ಓದುತ್ತಿದ್ದಾಳೋ ಬರೆಯುತ್ತಿದ್ದಾಳೋ? ಅವಳು ಓದುವದೂ ಇಲ್ಲ, ಬರೆಯುವದೂ ಇಲ್ಲ. ಆಕೆ ಸುಮ್ಮನೆ ಕೂತಿದ್ದಾಳೆ. ನೀನು ಈಗ ಓದುತ್ತಿದ್ದೀಯೇನು? ಇಲ್ಲ. ನಾನು ಈಗ ಬರೆಯುತ್ತಿದ್ದೇನೆ. ಆದರೆ ನೀನು ಓದುತ್ತಿದ್ದೀಯೆ. ಗೋವಿಂದ, ಗೋಪಾಲ, ನೀವಿಬ್ಬರೂ ಏನು ಮಾಡುತ್ತಿದ್ದೀರಿ? ನಾವಿಬ್ಬರೂ ಸುಮ್ಮನೆ ನಿಂತಿದ್ದೇವೆ. ನೀವು ಏನು ಮಾಡುತ್ತಿದ್ದೀರಿ? ನಾವೆಲ್ಲರೂ ಆಡುತ್ತಿದ್ದೇವೆ.

ನವಮಃ ಪಾಠಃ

ಅತ್ರ ದ್ವೌ ಬಾಲೌ ತಿಷ್ಠತಃ। ಕತರೋ ರಾಮಃ? ಅಸೌ ರಾಮಃ, ಅಯಂ ಲಕ್ಷ್ಮಣಃ। ಅತ್ರಾಪಿ ಕೇಚಿದ್ಬಾಲಕಾಃ ಸನ್ತಿ। ತತ್ರ ಕೃಷ್ಣೋಽಪಿ[1] ಕ್ರೀಡತಿ। ಕತಮಃ ಕೃಷ್ಣಃ? ಅಸೌ ಕೃಷ್ಣಃ, ಅಯಂ ಬಲರಾಮಃ। ಕೃಷ್ಣೋ ಧಾವತಿ ವಾ ತಿಷ್ಠತಿ ವಾ? ಸ ನ ಧಾವತಿ; ನಾಪಿ ತಿಷ್ಠತಿ। ತೂಷ್ಣೀಂ ಪಶ್ಯತಿ। ಬಲರಾಮ ಆಗಚ್ಛತಿ ವಾ ಗಚ್ಛತಿ ವಾ? ಸ ಗಚ್ಛತಿ। ರಾಮೋ ಗಚ್ಛತಿ ವಾ ತಿಷ್ಠತಿ ವಾ? ಸ ನ ಗಚ್ಛತಿ, ನಾಪಿ ತಿಷ್ಠತಿ। ಕಃ ಪ್ರವಿಶತಿ? ಕ ಉಪವಿಶತಿ? ಅಹಂ ಕ್ರೀಡಾಮಿ ಕಿಂ? ನ ಹಿ। ತ್ವಂ ಸದಾ ಪಠಸಿ। ಕಃ ಸದಾ ಕ್ರೀಡತಿ?

ಒಂಭತ್ತನೆಯ ಪಾಠ

ಇಲ್ಲಿ ಇಬ್ಬರು ಹುಡುಗರು ನಿಂತಿದ್ದಾರೆ. (ಇವರಿಬ್ಬರಲ್ಲಿ) ಯಾವನು ರಾಮನು? ಅವನು ರಾಮನು, ಇವನು ಲಕ್ಷ್ಮಣನು. ಇಲ್ಲಿಯೂ ಕೆಲವರು ಹುಡುಗರು ಇರುತ್ತಾರೆ. ಅಲ್ಲಿ ಕೃಷ್ಣನೂ ಆಡುತ್ತಿದ್ದಾನೆ. ಯಾವನು ಕೃಷ್ಣನು? ಅವನು ಕೃಷ್ಣನು, ಇವನು ಬಲರಾಮನು. ಕೃಷ್ಣನು ಓಡುತ್ತಾನೋ ನಿಂತಿದ್ದಾನೋ? ಅವನು ಓಡುವುದಿಲ್ಲ, ನಿಂತಿರುವುದೂ ಇಲ್ಲ. ಸುಮ್ಮನೆ ನೋಡುತ್ತಿದ್ದಾನೆ. ಬಲರಾಮನು ಬರುತ್ತಿದ್ದಾನೋ ಹೋಗುತ್ತಿದ್ದಾನೋ? ಅವನು ಹೋಗುತ್ತಿದ್ದಾನೆ. ರಾಮನು ಹೋಗುತ್ತಿದ್ದಾನೋ ನಿಂತಿದ್ದಾನೋ? ಅವನು ಹೋಗುವುದೂ ಇಲ್ಲ, ನಿಂತೂ ಇಲ್ಲ. ಯಾವನು ಒಳಕ್ಕೆ ಬರುತ್ತಾನೆ? ಯಾವನು ಕೂತುಕೊಂಡಿದ್ದಾನೆ? ನಾನು ಆಡುತ್ತೇನೇನು? ಇಲ್ಲವೇ ಇಲ್ಲ. ನೀನು ಯಾವಾಗಲೂ ಓದುತ್ತೀಯೆ. ಯಾವನು ಯಾವಾಗಲೂ ಆಡುತ್ತಾನೆ?

---

1. ಕೃಷ್ಣಃ+ಅಪಿ.

ದಶಮಃ ಪಾಠಃ

ಅಸೌ ದಶರಥಃ। ಅಯಂ ರಾಮಃ। ರಾಮೋ ಬಾಲಃ। ಸ ತಿಷ್ಠತಿ। ದಶರಥೋ ವೃದ್ಧಃ। ಸ ಉಪವಿಶತಿ। ಅಸೌ[1] ಕೌಸಲ್ಯಾ। ಇಯಂ ಸೀತಾ। ಕೌಸಲ್ಯಾ ವೃದ್ಧಾ। ಸಾ ನ ಗಚ್ಛತಿ। ಸೀತಾ ಬಾಲಾ। ಸಾ ಧಾವತಿ। ಅಯಂ ಕೃಷ್ಣಃ। ಕ ಏಷಃ? ಏಷ[2] ಬಲರಾಮಃ। ಬಲರಾಮ ಆಗಚ್ಛತಿ। ಕೃಷ್ಣ ಉತ್ತಿಷ್ಠತಿ। ಇಯಂ ರುಕ್ಮಿಣೀ। ಏಷಾ ತು ಸತ್ಯಭಾಮಾ। ಕೋಽಸೌ[3] ? ಸ ಉಪಾಧ್ಯಾಯಃ। ಕೋಽಯಂ[4] ? ಅಯಂ ಶ್ರೀನಿವಾಸಃ। ಸ ಛಾತ್ರಃ। ಕಾಽಸೌ? ಸಾ ಪಾರ್ವತೀ। ಕೇಯಂ[5] ? ಇಯಂ ಗೌರೀ। ಕೈಷಾ[6] ? ಏಷಾ ಸೀತಾ॥

ಹತ್ತನೆಯ ಪಾಠ

ಅವನು ದಶರಥನು. ಇವನು ರಾಮನು. ರಾಮನು ಹುಡುಗನು. ಅವನು ನಿಂತಿದ್ದಾನೆ. ದಶರಥನು ಮುದುಕನು. ಅವನು ಕೂತಿದ್ದಾನೆ, ಅವಳು ಕೌಸಲ್ಯೆ. ಇವಳು ಸೀತೆ. ಕೌಸಲ್ಯೆ ಮುದುಕಿ. ಅವಳು ಹೋಗುವದಿಲ್ಲ. ಸೀತೆ ಹುಡುಗಿ. ಅವಳು ಓಡುತ್ತಾಳೆ. ಇವನು ಕೃಷ್ಣನು. ಇವನು ಯಾರು? ಇವನು ಬಲರಾಮನು. ಬಲರಾಮನು ಬರುತ್ತಾನೆ. ಕೃಷ್ಣನು ಏಳುತ್ತಾನೆ. ಇವಳು ರುಕ್ಮಿಣಿ. ಈಕೆಯಾದರೋ ಸತ್ಯಭಾಮೆ. ಅವನು ಯಾರು? ಆತನು ಉಪಾಧ್ಯಾಯನು. ಇವರು ಯಾರು? ಇವನು ಶ್ರೀನಿವಾಸನು. ಅವನು ವಿದ್ಯಾರ್ಥಿಯು. ಇವಳು

---

1. ಅಸೌ = ಅವನು, ಅವಳು, ಆತನು, ಆಕೆ.
2. ಏಷಃ, ಏಷಾ - ಇವು ಅಯಂ, ಇಯಂ - ಎಂಬವುಗಳಿಗಿಂತ ಇನ್ನೂ ಹತ್ತಿರದಲ್ಲಿರುವುದನ್ನು ತೋರಿಸುವುದಕ್ಕೆ ಉಪಯೋಗವಾಗುವವು.
3. ಕಃ + ಅಸೌ
4. ಕಃ + ಅಯಂ. 'ಽ' ಎಂಬ ಗುರುತಿದ್ದರೆ ಅಕಾರವನ್ನು ಬಿಟ್ಟಿದೆ ಎಂದು ತಿಳಿಯಬೇಕು.
5. ಕಾ + ಇಯಂ
6. ಕಾ + ಏಷಾ.

ಯಾರು? ಆಕೆ ಪಾರ್ವತಿ. ಇವಳು ಯಾರು? ಈಕೆ ಗೌರಿ. ಈಕೆ ಯಾರು? ಈಕೆಯು ಸೀತೆ.

ಏಕಾದಶಃ ಪಾಠಃ

ಸೀತಾ ಕಿಂ ಕರೋತಿ? ಸಾ ಧಾವತಿ। ಜನಕಃ ಕಿಂ ಕರೋತಿ? ಸ ಹಸತಿ। ರುಕ್ಮಿಣೀ ಚ ಸತ್ಯಭಾಮಾ ಚ ಕಿಂ ಕುರುತಃ? ತೇ ಗಾಯತಃ। ಇತರಾ ಬಾಲಿಕಾಃ ಕಿಂ ಕುರ್ವನ್ತಿ? ತಾಃ ಕ್ರೀಡನ್ತಿ। ಕೇ ಪ್ರವಿಶನ್ತಿ? ಪುರುಷಾಃ ಪ್ರವಿಶನ್ತಿ। ಸ್ತ್ರಿಯಃ ಕಿಂ ಕುರ್ವನ್ತಿ? ತಾ ನಿರ್ಗಚ್ಛನ್ತಿ। ಕಿಂ ಸೀತಾ ಬಾಲಕಃ? ನ ಹಿ, ಸಾ ಬಾಲಿಕಾ। ಅತ್ರ ಕಾಶ್ಚಿದ್ಬಾಲಿಕಾ ಉಪವಿಶನ್ತಿ। ತತ್ರ ಕತಮಾ ಸೀತಾ? ಅಸೌ ಸೀತಾ, ಇಯಮೂರ್ಮಿಳಾ, ಏಷಾ ತು ಮಾಣ್ಡವೀ। ಕಾ ಗೌರೀ? ಇಯಂ ಗೌರೀ॥

ಹನ್ನೊಂದನೆಯ ಪಾಠ

ಸೀತೆ ಏನು ಮಾಡುತ್ತಾಳೆ? ಅವಳು ಓಡುತ್ತಿದ್ದಾಳೆ. ಜನಕನು ಏನು ಮಾಡುತ್ತಿದ್ದಾನೆ? ಅವನು ನಗುತ್ತಿದ್ದಾನೆ. ರುಕ್ಮಿಣಿಯೂ ಸತ್ಯ-ಭಾಮೆಯೂ ಏನು ಮಾಡುತ್ತಿದ್ದಾರೆ? ಅವರಿಬ್ಬರೂ ಹಾಡುತ್ತಿದ್ದಾರೆ. ಉಳಿದ ಹುಡುಗಿಯರು ಏನು ಮಾಡುತ್ತಿದ್ದಾರೆ? ಅವರು ಆಡುತ್ತಿದ್ದಾರೆ. ಯಾರು ಒಳಕ್ಕೆ ಬರುತ್ತಾರೆ? ಗಂಡಸರು ಒಳಕ್ಕೆ ಬರುತ್ತಾರೆ. ಹೆಂಗಸರು ಏನು ಮಾಡುತ್ತಾರೆ? ಅವರು ಹೊರಗೆ ಹೋಗುತ್ತಾರೆ. ಸೀತೆಯು ಹುಡುಗನೇನು? ಅಲ್ಲವೇ ಅಲ್ಲ, ಅವಳು ಹುಡುಗಿ. ಇಲ್ಲಿ ಕೆಲವರು ಹುಡುಗಿಯರು ಕೂತಿದ್ದಾರೆ. ಅಲ್ಲಿ ಸೀತೆ ಯಾರು? ಅವಳು ಸೀತೆ, ಇವಳು ಊರ್ಮಿಳೆ, ಆದರೆ ಇವಳು ಮಾಂಡವಿ. ಗೌರಿ ಯಾವಳು? ಇವಳು ಗೌರಿ.

ದ್ವಾದಶಃ ಪಾಠಃ

ಕೋऽಸೌ ಪ್ರಾಣೀ? ಅಯಂ[1] ಕುಕ್ಕುಟಃ। ಇಯಂ ಕುಕ್ಕುಟೀ। ಕೋऽಸೌ? ಅಸೌ ವೃಷಭಃ। ಇಯಂ ಗೌಃ। ಅಯಂ ವತ್ಸಃ। ಅಸೌ ಮಹಿಷಃ। ಇಯಂ ಮಹಿಷೀ। ಏಷೋऽಶ್ವಃ। ಅಯಮಶ್ವಃ ಕಿಂ? ನ ಹಿ ನ ಹಿ। ಸ ಗರ್ದಭಃ। ಅಸೌ ಕುಕ್ಕುರಃ। ಕಿಮಯಂ ಮಹಿಷಃ? ನಾಯಂ ಮಹಿಷಃ। ಸಾ ಮಹಿಷೀ। ಅಯಂ ಛಾಗಃ। ಇಯಮಜಾ॥

ಹನ್ನೆರಡನೆಯ ಪಾಠ

ಆ ಪ್ರಾಣಿ ಯಾವದು? ಇದು ಹುಂಜವು. ಇದು ಹೇಂಟೆ. ಅದು ಯಾವದು? ಅದು ಎತ್ತು. ಇದು ಹಸು. ಇದು ಕರು. ಅದು ಕೋಣ. ಇದು ಎಮ್ಮೆ. ಇದು ಕುದುರೆ. ಇದು ಕುದುರೆಯೇನು? ಅಲ್ಲ, ಅಲ್ಲ. ಅದು ಕತ್ತೆ. ಅದು ನಾಯಿ. ಇದು ಕೋಣವೇನು? ಇದು ಕೋಣವಲ್ಲ. ಅದು ಎಮ್ಮೆ. ಇದು ಟಗರು. ಇದು ಆಡು.

ತ್ರಯೋದಶಃ ಪಾಠಃ

ಇದಾನೀಂ ಪ್ರಾತಃಕಾಲಃ। ಕುಕ್ಕಟೋ ರೌತಿ। ಪಕ್ಷಿಣಃ ಕೂಜನ್ತಿ। ಗರ್ದಭಾಶ್ಚೀತ್ಕುರ್ವನ್ತಿ[2] । ವಾಯುಃ ಶೀತಲಂ ವಾತಿ। ಭಾನುರುದೇತಿ[3] । ಜನಾಃ ಸಞ್ಚರನ್ತಿ। ಅಶ್ವಾ

---

1. ಗಂಡುಪ್ರಾಣಿಗಳ ಹೆಸರು ಪುಲ್ಲಿಂಗ, ಹೆಣ್ಣು ಪ್ರಾಣಿಗಳ ಹೆಸರು ಸ್ತ್ರೀ ಲಿಂಗ - ಎಂಬುದು ಸಂಸ್ಕೃತದಲ್ಲಿ ಸಾಮಾನ್ಯನಿಯಮ. ಈ ಸಂದರ್ಭದಲ್ಲಿ ಇದು, ಈ-ಎಂಬುದಕ್ಕೆ ಲಿಂಗಾನುಸಾರ ಅಯಂ, ಇಯಂ, ಏಷಃ, ಏಷಾ-ಎಂಬ ಮಾತುಗಳನ್ನೂ, ಅದು ಆ-ಎಂಬುದಕ್ಕೆ ಅಸೌ, ಸಃ, ಸಾ-ಎಂಬ ಮಾತುಗಳನ್ನೂ ತಕ್ಕಂತೆ ಉಪಯೋಗಿಸಬೇಕು.
2. ಗರ್ದಭಾಃ + ಚೀತ್ಕುರ್ವನ್ತಿ
3. ಭಾನುಃ + ಉದೇತಿ

ಹೇಷನ್ತೇ[1] । ವೃಷಭಾ[2] ನರ್ದನ್ತಿ। ಗೋಪಾಲಾ[3] ಆಗಚ್ಛನ್ತಿ। ಗಾವೋ ಗಚ್ಛನ್ತಿ। ವತ್ಸಾ ನೃತ್ಯನ್ತಿ। ಮಹಿಷ್ಯೋ ಮಹಿಷಾಶ್ಚ ತತ್ರ ಸಙ್ಗಚ್ಛನ್ತೇ। ಬಾಲಾಃ ಕ್ರೀಡನ್ತಿ। ಕುಕ್ಕುರಾ ಭಷನ್ತಿ। ಮಹಾನ್ ಕೋಲಾಹಲೋ ಭವತಿ॥

ಹದಿಮೂರನೆಯ ಪಾಠ

ಈಗ ಬೆಳಗಿನ ಹೊತ್ತು. ಕೋಳಿ ಕೂಗುತ್ತದೆ. ಹಕ್ಕಿಗಳು ಚಿಲಿಪಿಲಿ-ಗುಟ್ಟುತ್ತವೆ. ಕತ್ತೆಗಳು ಅರಚುತ್ತವೆ. ಗಾಳಿ ತಣ್ಣಗೆ ಬೀಸುತ್ತದೆ. ಸೂರ್ಯನು ಹುಟ್ಟುತ್ತಾನೆ. ಜನರು ಓಡಾಡುತ್ತಾರೆ. ಕುದುರೆಗಳು ಕೆನೆ-ಯುತ್ತವೆ. ಎತ್ತುಗಳು ಗುಟರು ಹಾಕುತ್ತವೆ. ದನಕಾಯುವವರು ಬರುತ್ತಾರೆ. ಹಸುಗಳು ಹೋಗುತ್ತವೆ. ಕರುಗಳು ಕುಣಿಯುತ್ತವೆ. ಎಮ್ಮೆಗಳೂ ಕೋಣಗಳೂ ಅಲ್ಲಿ ಸೇರುತ್ತವೆ. ಹುಡುಗರು ಆಡುತ್ತಾರೆ. ನಾಯಿಗಳು ಬೊಗಳುತ್ತವೆ. ದೊಡ್ಡ ಗದ್ದಲವಾಗುತ್ತದೆ.

ಚತುರ್ದಶಃ ಪಾಠಃ

ಕಿಮಿದಂ? ಅಯಮುಷ್ಣೀಷಃ। ಕಸ್ಯಾಯಮುಷ್ಣೀಷಃ[4] ? ಉಷ್ಣೀಷೋ ನ ಮಮ। ತವೈವಾಯಮ್[5] । ಕಿಮಿದಮ್[6] ? ಇಯಂ ಮಮ ಶಾಟೀ। ಕಿಮಿದಂ ತವ ಚೇಲಂ?

---

1. ಅಶ್ವಾಃ + ಹೇಷನ್ತೇ
2. ವೃಷಭಾಃ + ನರ್ದನ್ತಿ
3. ಗೋಪಾಲಾಃ + ಆಗಚ್ಛನ್ತಿ
4. ಕಸ್ಯ + ಅಯಂ + ಉಷ್ಣೀಷಃ.
5. ತವ + ಏವ + ಅಯಂ.
6. ನಿರ್ಜೀವ ವಸ್ತುಗಳನ್ನು ಹೇಳುವ ವಸ್ತುಗಳ ಹೆಸರು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರೂ ಆಗಿರಬಹುದು. ಉದಾಹರಣೆ: ಉಷ್ಣೀಷಃ (ಪು), ಶಾಟೀ (ಸ್ತ್ರೀ), ಚೇಲಂ (ನ): ವಸ್ತುವಿನ ಹೆಸರು ಹೇಳದೆ ಇರುವಾಗ ಪ್ರಶ್ನೆಯನ್ನು ನಪುಂಸಕಲಿಂಗದಿಂದಲೇ ಮಾಡುವುದು.

ಏವಂ। ಮಮೈವ ತತ್। ಅಯಂ ಮಮ ಕವಚಃ। ತಸ್ಯಾಃ ಕಞ್ಚುಕಃ ಕುತ್ರ ವರ್ತತೇ? ತತ್ರ ಪೇಟಕಾಯಾಮಸ್ತಿ। ಅಯಂ ಕಸ್ಯಾದರ್ಶಃ[1] ? ಆದರ್ಶಃ ಕೃಷ್ಣಸ್ಯ। ಕಟಃ ಕುತ್ರ ವರ್ತತೇ? ಗೃಹೇ ವರ್ತತೇ। ಇದಂ ಬಹು ಸುನ್ದರಂ ಚಿತ್ರಮ್। ಕಸ್ಯೇದಂ[2] ? ಇದಂ ಗೋವಿನ್ದಸ್ಯ ಚಿತ್ರಮ್। ಕಸ್ಯೇದಂ ಪುಸ್ತಕಂ? ಇದಂ ಮಮೈವ। ಕಿಞ್ಚಿತ್ ಪಠ, ಪಶ್ಯಾಮಿ। ಕಸ್ತ್ವಂ[3] ? ಅಹಮೇಕಶ್ಛಾತ್ರಃ। ಕೋ ಭವಾನ್[4] ? ತವ ಮಿತ್ರಂ ಗೋಪಾಲಃ। ಅಸೌ ಮೇ ಸಖಾ। ತವ ಶಿರಸ್ತ್ರಂ ಕುತ್ರ ವಿದ್ಯತೇ? ಮಮ ಹಸ್ತೇ ವಿದ್ಯತೇ। ಕೋಽಯಂ? ಅಯಂ ಮೇ ಭ್ರಾತಾ। ಕೇಯಂ? ಇಯಂ ತೇ ಭಗಿನೀ। ಕಿಮಸೌ ಮಮ ಭಗಿನೀ? ಅಥ ಕಿಂ?

ಹದಿನಾಲ್ಕನೆಯ ಪಾಠ

ಏನಿದು? ಇದು ರುಮ್ಮಾಲು. ಇದು ಯಾರ ರುಮ್ಮಾಲು? ರುಮ್ಮಾಲು ನನ್ನದಲ್ಲ. ಇದು ನಿನ್ನದೇ. ಇದೇನು? ಇದು ನನ್ನ ಪಂಚೆ. ಇದು ನಿನ್ನ ಶಲ್ಯವೇನು? ಹೀಗೆಯೇ (= ಹೌದು). ಅದು ನನ್ನದೇ. ಇದು ನನ್ನ ಅಂಗಿಯು. ಆಕೆಯ ಕುಪ್ಪುಸವು ಎಲ್ಲಿದೆ? ಅಲ್ಲಿ ಪೆಟ್ಟಿಗೆಯಲ್ಲಿದೆ. ಇದು ಯಾರ ಕನ್ನಡಿ? ಕನ್ನಡಿಯು ಕೃಷ್ಣನದು. ಚಾಪೆ ಎಲ್ಲಿದೆ? ಮನೆಯಲ್ಲಿದೆ. ಇದು ಬಲು ಸೊಗಸಾದ ಚಿತ್ರವು. ಯಾರದಿದು? ಇದು ಗೋವಿಂದನ ಚಿತ್ರವು. ಯಾರದೀ ಪುಸ್ತಕ? ಇದು ನನ್ನದೇ. ಸ್ವಲ್ಪ ಓದು, ನೋಡುತ್ತೇನೆ. ನೀನು ಯಾರು? ನಾನೊಬ್ಬ ವಿದ್ಯಾರ್ಥಿ. ನೀವು ಯಾರು? ನಿನ್ನ ಸ್ನೇಹಿತ ಗೋಪಾಲನು. ಅವನು ನನ್ನ

---

1. ಕಸ್ಯ + ಆದರ್ಶಃ
2. ಕಸ್ಯ + ಇದಂ
3. ಕಃ + ತ್ವಂ
4. ಭವಾನ್ = ನೀನು. ಇದನ್ನು ಮರ್ಯಾದೆಯನ್ನು ತೋರಿಸುವುದಕ್ಕೆ ಉಪಯೋಗಿಸು-ತ್ತಾರೆ. ಇದಕ್ಕೆ ಪ್ರಥಮಪುರುಷದ ಕ್ರಿಯೆ ಬೇಕಾಗುವುದು.

ಗೆಳೆಯನು. ನಿನ್ನ ತೋಪಿ ಎಲ್ಲಿ ಇದೆ? ನನ್ನ ಕೈಯಲ್ಲಿ ಇದೆ. ಇವನು ಯಾರು? ಇವನು ನನ್ನ ಸಹೋದರನು. ಈಕೆ ಯಾರು? ಈಕೆ ನಿನ್ನ ಸಹೋದರಿ. ಆಕೆ ನನ್ನ ಸಹೋದರಿಯೇನು? ಮತ್ತೇನು? (=ಹೌದು.)

ಪಞ್ಚದಶಃ ಪಾಠಃ

ಕಃ ಕ್ರನ್ದತಿ ಮಾಂ? ಅಹಂ ತೇ ಸಖಾ। ಕವಾಟಮುದ್ಘಾಟಯ। ಸಖೇ, ಅನ್ತರಾಗಚ್ಛ[1] । ಅತ್ರೋಪವಿಶ। ಅಮೀ ಕೇ? ಇಮೇ ಮಮ ಸಖಾಯಃ। ಅನ್ತರಾಗಮ್ಯತಾಮ್[2] । ಅತ್ರೋಪವಿಶ್ಯತಾಮ್। ಅತ್ರೋಪವಿಶನ್ತು ಭವನ್ತಃ[3] । ಅಸ್ಮಿನ್ ಪೀಠೇ ಉಪವಿಶ್ಯತಾಮ್। ಇತ ಇತಃ। ಅತಿ ಶ್ರಾನ್ತೋಽಸಿ। ಕುತ[4] ಆಯಾತಃ? ಕಿಂ ತೇ ದದಾನಿ? ಅಪಿ ಕುಶಲಂ ಭವತಾಮ್? ಸರ್ವೇ ಕುಶಲಿನೋ ವಯಮ್। ಅಪಿ ಕುಶಲೀ ಭವಾನ್? (ಅಪಿ ಶಿವಂ ಭವತಃ?) ಯೂಯಂ ದೂರಾದಾಗತಾಃ। ಕಿಂ ಕಾಫೀಂ ರೋಟಿಕಾಂ ಚ ಆನೇಷ್ಯಾಮಿ? ನ ಹಿ ನ ಹಿ। ನ ವಯಂ ಕಾಫೀಂ ಪಿಬಾಮಃ। ನಾಪಿ ರೋಟೀಂ ಖಾದಾಮಃ। ಅನ್ಯತ್ ಕಿಮಪಿ ನಾಸಾದ್ಯತೇ ಕಿಂ? ಪಾಣೀ ಪಾದೌ ಚ ಪ್ರಕ್ಷಾಲಯತ। ಕ್ಷೀರಂ ಫಲಂ ಚಾನೇಷ್ಯಾಮಿ॥

---

1. ಅಂತಃ + ಆಗಚ್ಛ

2. ಆಗಚ್ಛ, ಆಗಚ್ಛತ (=ಬಾ, ಬನ್ನಿ) ಎನ್ನುವುದಕ್ಕಿಂತ ಆಗಮ್ಯತಾಂ (=ಬರೋಣಾಗಬೇಕು) ಎನ್ನುವುದು ಗೌರವ.

3. ಭವನ್ತಃ = ತಾವು, ಇದು ಗೌರವದ ಮಾತು. ಬಹುವಚನವಾದರೂ ಒಬ್ಬರಿಗೂ ಉಪಯೋಗಿಸುವುದುಂಟು. ಇದಕ್ಕೆ ಪ್ರಥಮಪುರುಷದ ಕ್ರಿಯಾಪದ ಬೇಕು.

4. ಕುತಃ + ಆಯಾತಃ

ಹದಿನೈದನೆಯ ಪಾಠ

ಯಾವನು ನನ್ನನ್ನು ಕೂಗಿಕರೆಯುತ್ತಾನೆ (=ಯಾರು ನನ್ನನ್ನು ಕೂಗುವವರು)? ನಾನು ನಿನ್ನ ಗೆಳೆಯ. ಬಾಗಿಲು ತೆರೆ. ಗೆಳೆಯನೆ, ಒಳಗೆ ಬಾ. ಇಲ್ಲಿ ಕೂತುಕೊ. ಅವರು ಯಾರು? ಇವರು ನನ್ನ ಗೆಳೆಯರು. ಒಳಗೆ ಬರೋಣಾಗಲಿ. ಇಲ್ಲಿ ಕೂತುಕೊಳ್ಳೋಣಾಗಬೇಕು. ತಾವು ಇಲ್ಲಿ ಕೂತುಕೊಳ್ಳಿರಿ. ಈ ಪೀಠದಲ್ಲಿ ಕೂತುಕೊಳ್ಳೋಣಾಗಬೇಕು. ಇತ್ತ, ಇತ್ತ (=ಹೀಗೆ ಬರಬೇಕು). ಬಹಳ ಆಯಾಸಪಟ್ಟವನಾಗಿದ್ದೀಯೆ. ಎಲ್ಲಿಂದ ಬಂದೆ? ನಿನಗೆ ಏನು ಕೊಡಲಿ? ತಮಗೆ ಕ್ಷೇಮವೆ? ನಾವೆಲ್ಲರೂ ಕ್ಷೇಮ. ನೀನು ಕ್ಷೇಮವೆ? (ನಿನಗೆ ಕ್ಷೇಮವೆ?) ನೀವು ದೂರದಿಂದ ಬಂದಿದ್ದೀರಿ. ಕಾಫಿಯನ್ನೂ ರೊಟ್ಟಿಯನ್ನೂ ತರಲೇನು? ಇಲ್ಲ, ಇಲ್ಲ. ನಾವು ಕಾಫಿಯನ್ನು ಕುಡಿಯುವುದಿಲ್ಲ, ರೊಟ್ಟಿಯನ್ನೂ ತಿನ್ನುವುದಿಲ್ಲ. ಇನ್ನೇನೂ ಸಿಕ್ಕುವುದಿಲ್ಲವೇನು? ಕೈಕಾಲು ತೊಳೆದುಕೊಳ್ಳಿ. ಹಾಲನ್ನೂ ಹಣ್ಣನ್ನೂ ತರುವೆನು.

ಷೋಡಶಃ ಪಾಠಃ

ಅಮ್ಬಾ ಆಹ್ವಯತಿ। ಸರ್ವೇ ಆಗಚ್ಛತ। ಯೂಯಂ ತತ್ರ ಕಿಂ ಕುರುಥ? ಅತ್ರ ಕ್ರೀಡಾಮಃ। ಶೀಘ್ರಂ ಆಗಚ್ಛತ। ವಯಂ ಕ್ಷುಧಿತಾಃ। ಅಸ್ಮಭ್ಯಂ ಕಿಞ್ಚಿತ್ ಖಾದ್ಯಂ ದೇಹಿ। ಕಿಂ ವಾಞ್ಛಥ? ಕಿಂ ಪೃಥುಕಾನ್[1] ದಾಸ್ಯಾಮಿ, ಕಿಂ ವಾ ಲಾಜಾನ್ ದಾಸ್ಯಾಮಿ? ಮಹ್ಯಂ ಲಾಜಾನ್ ದೇಹಿ। ಮಹ್ಯಂ ಪೃಥುಕಾನ್ ದೇಹಿ। ಗುಡಮಪಿ ದೇಹಿ। ಅಹಂ ತೃಷಿತಃ। ಕಿಞ್ಚಿತ್ ಕ್ಷೀರಂ ದೇಹಿ। ತುಭ್ಯಂ ಲಾಜಾ ನ ರೋಚನ್ತೇ ಕಿಂ? ನ ಹಿ। ಮಹ್ಯಂ ಶಷ್ಕುಲೀಂ ದೇಹಿ। ಯುಷ್ಮಭ್ಯಂ ಕಿಂ ದದಾನಿ? ಮಹ್ಯಂ ಮೋದಕಂ ದೇಹಿ। ಅತ್ರೋಪವಿಶತ। ಇದಾನೀಂ ಭೋಜನಂ ಕುರುತ। ಜಲಂ ಪಿಬತ। ಪಾಣೀ

1. ಬಹುವಚನ

ಪಾದೌ ಚ ಪ್ರಕ್ಷಾಲಯತ। ಫಲಾನಿ ದಾಸ್ಯಾಮಿ। ಕಿಂ ಬ್ರೂಥ? ಅಸ್ಮಭ್ಯಂ ಖಾದ್ಯಮೇವ ಪ್ರಥಮಂ ದೇಹಿ। ಪಶ್ಚಾದ್ಭೋಜನಂ[1] ಕರಿಷ್ಯಾಮಃ॥

ಹದಿನಾರನೆಯ ಪಾಠ

ತಾಯಿ ಕರೆಯುತ್ತಾಳೆ. ಎಲ್ಲರೂ ಬನ್ನಿ. ನೀವು ಅಲ್ಲಿ ಏನು ಮಾಡುತ್ತಿದ್ದೀರಿ? ಇಲ್ಲಿ ಆಡುತ್ತಿದ್ದೇವೆ. ಬೇಗ ಬನ್ನಿರಿ. ನಾವು ಹಸಿದಿದ್ದೇವೆ. ನಮಗೆ ಏನಾದರೂ ತಿಂಡಿ ಕೊಡು. ಏನನ್ನು ಅಪೇಕ್ಷಿಸುತ್ತೀರಿ? (=ಏನು ಬೇಕು?) ಅವಲಕ್ಕಿಯನ್ನು ಕೊಡಲೊ ಅಥವಾ ಅರಳನ್ನು ಕೊಡಲೊ? ನನಗೆ ಅರಳು ಕೊಡು. ನನಗೆ ಅವಲಕ್ಕಿ ಕೊಡು. ಬೆಲ್ಲವನ್ನೂ ಕೊಡು. ನಾನು ಬಾಯಾರಿದ್ದೇನೆ. ಸ್ವಲ್ಪ ಹಾಲು ಕೊಡು. ನಿನಗೆ ಅರಳು ಸೇರುವುದಿಲ್ಲವೇನು? ಇಲ್ಲ. ನನಗೆ ಚಕ್ಕುಲಿ ಕೊಡು. ನಿಮಗೆ ಏನು ಕೊಡಲಿ? ನನಗೆ ಕಡುಬು ಕೊಡು. ಇಲ್ಲಿ ಕೂತುಕೊಳ್ಳಿ. ಈಗ ಊಟಮಾಡಿರಿ. ನೀರು ಕುಡಿಯಿರಿ. ಕೈ ಕಾಲುಗಳನ್ನು ತೊಳೆದುಕೊಳ್ಳಿ. ಆಮೇಲೆ ಹಣ್ಣುಗಳನ್ನು ಕೊಡುವೆನು. ಏನೆನ್ನುತ್ತೀರಿ? ನಮಗೆ ತಿಂಡಿಯನ್ನೇ ಮೊದಲು ಕೊಡು. ಆಮೇಲೆ ಊಟಮಾಡುವೆವು.

ಸಪ್ತದಶಃ ಪಾಠಃ

ರಾಮಮಾಹ್ವಯ। ಶಙ್ಕರಃ ಕುತ್ರ ವರ್ತತೇ? ಮಲ್ಲಿಕಾರ್ಜುನಃ ಕುತ್ರಾಸ್ತಿ? ತಾವ-ಪ್ಯಾಹ್ವಯ। ಗೋವಿನ್ದಮಪ್ಯಾಹ್ವಯ। ರಾಮಾಯ[2] ಲಾಜಾನ್ ದೇಹಿ। ಅನ್ಯೇಭ್ಯಃ ಪೃಥುಕಾನ್ ದೇಹಿ। ಅತ್ರ ತ್ರೀಣಿ ಫಲಾನಿ ಸನ್ತಿ। ತಾನಿ ಕಸ್ಮೈ ದದಾನಿ? ಇದಂ

---

1. ಪಶ್ಚಾತ್ + ಭೋಜನಂ.

2. ಚತುರ್ಥೀವಿಭಕ್ತಿಯನ್ನು ಪಂಡಿತರುಗಳು "ಓಸ್ಕರ" ಎಂದು ಕನ್ನಡಿಸುವ ವಾಡಿಕೆಯುಂಟು. ಉದಾ: ರಾಮಾಯ = ರಾಮನಿಗೋಸ್ಕರ. ಷಷ್ಠೀವಿಭಕ್ತಿಗೆ "ಗೆ" ಎಂದು ಕೆಲವು ವೇಳೆ ಕನ್ನಡಿಸಬೇಕಾಗುವದು; ಅದಕ್ಕಾಗಿ ಈ ಪದ್ಧತಿಯನ್ನು ಇಟ್ಟುಕೊಂಡಿರುವರು.

ಶಙ್ಕರಾಯ, ಇದಂ ಮಲ್ಲಿಕಾರ್ಜುನಾಯ। ಮಹ್ಯಮೇಕಂ ದೇಹಿ। ಗೋವಿನ್ದಾಯ ಶಷ್ಕುಲೀಂ ದಾಸ್ಯಾಮಿ। ತಸ್ಮೈ ಶಷ್ಕುಲೀ ನ ರೋಚತೇ। ತರ್ಹಿ ಕ್ಷೀರಂ ದಾಸ್ಯಾಮಿ। ಅನ್ಯತ್ ಕಿಮಪಿ ನಾಸ್ತಿ। ಸೀತಾಪ್ಯಾಗಮಿಷ್ಯತಿ। ತಸ್ಯೈ ಕಿಂ ದಾಸ್ಯಸಿ? ಹರಯೇ ಕಿಂ ದಾಸ್ಯಸಿ? ಶಮ್ಭವೇ ಕಿಂ ದಾಸ್ಯಸಿ? ತೇಭ್ಯಃ ಪಶ್ಚಾತ್ಕಿಮಪಿ ದಾಸ್ಯಾಮಿ। ಯುಷ್ಮಾಕಂ ಕಿಂ ವಾಞ್ಛಿತಮ್? ಅಸ್ಮಾಕಂ ಕಿಮಪಿ ಮಾಸ್ತು। ಅಲಂ ಖಾದ್ಯೇನ॥

ಹದಿನೇಳನೆಯ ಪಾಠ

ರಾಮನನ್ನು ಕರೆ. ಶಂಕರನು ಎಲ್ಲಿರುತ್ತಾನೆ? ಮಲ್ಲಿಕಾರ್ಜುನನು ಎಲ್ಲಿದ್ದಾನೆ? ಅವರಿಬ್ಬರನ್ನೂ ಕರೆ. ಗೋವಿಂದನನ್ನೂ ಕರೆ. ರಾಮನಿಗೆ ಅರಳು ಕೊಡು. ಉಳಿದವರಿಗೆ ಅವಲಕ್ಕಿ ಕೊಡು. ಇಲ್ಲಿ ಮೂರು ಹಣ್ಣುಗಳು ಇವೆ. ಅವುಗಳನ್ನು ಯಾರಿಗೆ ಕೊಡಲಿ? ಇದು ಶಂಕರನಿಗೆ. ಇದು ಮಲ್ಲಿಕಾರ್ಜುನನಿಗೆ. ನನಗೆ ಒಂದು ಕೊಡು. ಗೋವಿಂದನಿಗೆ ಚಕ್ಕುಲಿ ಕೊಡುವೆನು. ಅವನಿಗೆ ಚಕ್ಕುಲಿ ಸೇರುವುದಿಲ್ಲ. ಹಾಗಾದರೆ ಹಾಲು ಕೊಡುವೆನು. ಇನ್ನೇನೂ ಇಲ್ಲ. ಸೀತೆಯೂ ಬರುವಳು ಅವಳಿಗೆ ಏನು ಕೊಡುವೆ? ಹರಿಗೆ ಏನು ಕೊಡುವೆ? ಶಂಭುವಿಗೆ ಏನು ಕೊಡುವೆ? ಅವರಿಗೆ ಆಮೇಲೆ ಏನಾದರೂ ಕೊಡುವೆನು. ನಿಮಗೆ ಏನು ಬೇಕು? ನಮಗೆ ಏನೂ ಬೇಡ. ತಿಂಡಿ ಸಾಕು.

ಅಷ್ಟಾದಶಃ ಪಾಠಃ

ತವ ಶಾಟೀ ಸ್ಥೂಲಾ। ತವ ಚೇಲಮಪಿ ಸ್ಥೂಲಮೇವ। ಮಮ ವಸ್ತ್ರಾಣಿ ತು ಸೂಕ್ಷ್ಮಾಣಿ ವರ್ತನ್ತೇ। ಇಮಾನಿ ವಿದೇಶೀಯಾನಿ ವಸ್ತ್ರಾಣಿ। ವಯಂ ಸ್ವದೇಶೀಯಾನ್ಯೇವ ವಸ್ತ್ರಾಣಿ ಧಾರಯಾಮಃ। ಏತದ್ದೇಶೀಯಾನಿ ವಸ್ತ್ರಾಣಿ ಗುರೂಣಿ ವರ್ತನ್ತೇ। ಅಹಂ ಲಘೂನಿ ವಸ್ತ್ರಾಣಿ ನಾಭಿಲಷಾಮಿ। ತಾನಿ ವಸ್ತ್ರಾಣಿ ನ ಚಿರಂ ತಿಷ್ಠನ್ತಿ। ಅಸ್ಮದ್ದೇಶೀಯಾನಿ ವಸ್ತ್ರಾಣಿ ಚಿರಸ್ಥಾಯೀನಿ। ಅಯಂ ಕುವಿನ್ದಃ

ಸುನ್ದರಾಣಿ ಸ್ಥಾಯೀನಿ ಚ ವಸ್ತ್ರಾಣಿ ವಯತಿ। ಅಯಂ ಪಟಃ ಸ್ವಲ್ಪಾಯಾಮಃ। ಅಸ್ಯ ವಿಸ್ತಾರೋಽಪಿ ದ್ವೌ ಹಸ್ತೌ। ಅತಃ ಸ್ನಾನಶಾಟೀ ಭವಿಷ್ಯತಿ। ಅಸ್ಯ ಪಟಸ್ಯ ಕೋಽರ್ಘಃ? ಅಯಂ ಬಹುದೃಢಃ। ಅಸ್ಯ ಮೂಲ್ಯಂ ತ್ರೀಣಿ ರೂಪ್ಯಕಾಣಿ ಭವತಿ॥

ಹದಿನೆಂಟನೆಯ ಪಾಠ

ನಿನ್ನ ಪಂಚೆ ದಪ್ಪ. ನಿನ್ನ ಶಲ್ಯವೂ ದಪ್ಪವೇ. ಆದರೆ ನನ್ನ ಬಟ್ಟೆಗಳು ತೆಳ್ಳಗೆ ಇವೆ. ಇವು ಬೇರೆ ದೇಶದ ಬಟ್ಟೆಗಳು. ನಾವು ನಮ್ಮ ದೇಶದ ಬಟ್ಟೆಗಳನ್ನೇ ಉಡುತ್ತೇವೆ. ಈ ದೇಶದ ಬಟ್ಟೆಗಳು ಭಾರವಾಗಿರುತ್ತವೆ. ನಾನು ಹಗುರವಾದ ಬಟ್ಟೆಗಳನ್ನು ಅಪೇಕ್ಷಿಸುವದಿಲ್ಲ. (=ನನಗೆ ಹಗುರು ಬಟ್ಟೆಗಳು ಬೇಡ.) ಆ ಬಟ್ಟೆಗಳು ಬಹು ಕಾಲ ನಿಲ್ಲುವದಿಲ್ಲ. (=ಬಾಳುವುದಿಲ್ಲ.) ನಮ್ಮ ದೇಶದ ಬಟ್ಟೆಗಳು ಬಹು ಕಾಲ ಬಾಳಿಕೆ ಬರುವಂಥವು. ಈ ನೇಯ್ಗೆಯವನು ಸೊಗಸಾಗಿಯೂ ಬಾಳಿಕೆ ಬರುವವಾಗಿಯೂ ಇರುವ ಬಟ್ಟೆಗಳನ್ನು ನೇಯುತ್ತಾನೆ. ಈ ಬಟ್ಟೆ ಸ್ವಲ್ಪ ಉದ್ದವುಳ್ಳದ್ದು (=ಉದ್ದ ಕಡಿಮೆ). ಇದರ ಅಗಲವೂ ಎರಡು ಮೊಳ. ಆದ್ದರಿಂದ ಸ್ನಾನದ ಪಂಚೆಯಾಗುವುದು. ಈ ಬಟ್ಟೆಗೆ ಏನು ಬೆಲೆ? ಇದು ಬಹಳ ಗಟ್ಟಿ. ಇದರ ಬೆಲೆ ಮೂರು ರೂಪಾಯಿ ಆಗುವುದು.

ಏಕೋನವಿಂಶಃ ಪಾಠಃ

ಅಯಂ ಪಟಃ[1] ಸ್ಥೂಲಃ। ಅತ್ರ ದ್ವೌ ಪಟೌ ವಿದ್ಯೇತೇ। ಕಿಂ ತೌ ಸ್ಥೂಲೌ ಸೂಕ್ಷ್ಮೌ ವಾ? ದ್ವಾವಪಿ[2] ಸ್ಥೂಲೌ? ತವ ಪಟಾಃ ಸರ್ವೇ ಸ್ಥೂಲಾಃ। ಮಮ ಶಾಟೀಂತು

---

1. ವಿಶೇಷಣಗಳು ವಿಶೇಷ್ಯದ ಲಿಂಗವನ್ನು ಅನುಸರಿಸಿ ಬರುತ್ತವೆ. ಉದಾಹರಣೆ: ಸ್ಥೂಲಃ ಪಟಃ (ದಪ್ಪ ಬಟ್ಟೆ), ಸ್ಥೂಲಾ ಶಾಟೀ (ದಪ್ಪ ಪಂಚೆ), ಸ್ಥೂಲಂ ವಸ್ತ್ರಂ (ದಪ್ಪ ವಸ್ತ್ರ). ಲಿಂಗಭೇದದಿಂದ ಆಗುವ ರೂಪಭೇದಗಳನ್ನು ಶಬ್ದಕೋಶದಲ್ಲಿ ಕೊಟ್ಟಿರುತ್ತದೆ.

2. ದ್ವೌ + ಅಪಿ

ಸೂಕ್ಷ್ಮಾ। ಗೋವಿನ್ದಸ್ಯ ಗೋಪಾಲಸ್ಯ ಚ ಶಾಟ್ಯೌ ಸೂಕ್ಷ್ಮೇ। ಕಿಮಿಮಾಃ ಶಾಟ್ಯಃ ಸರ್ವಾಃ ಸೂಕ್ಷ್ಮಾಃ? ನ, ಕಾಶ್ಚಿತ್ಸ್ಥೂಲಾ[1] ಅಪಿ ವಿದ್ಯನ್ತೇ। ಇದಂ ವಸ್ತ್ರಂ ಸ್ಥಾಯಿ। ಗೃಹಸ್ಯಾನ್ತರ್ದ್ವೇ[2] ವಸ್ತ್ರೇ ಸ್ತಃ। ತೇ ನ ಸ್ಥಾಯಿನೀ। ಅಸ್ಮದ್ದೇಶೀಯಾನಿ ವಸ್ತ್ರಾಣಿ ಸರ್ವಾಣ್ಯಪಿ[3] ಸ್ಥಾಯೀನಿ ಕಿಂ? ಗ್ರೀಷ್ಮೇ ಕಾರ್ಪಾಸಿಕಾನಿ ವಸ್ತ್ರಾಣಿ ಸುಖಾನಿ ಭವನ್ತಿ। ಔರ್ಣಾನಿ ತು ವಸ್ತ್ರಾಣಿ ಹೇಮನ್ತೇ ಹಿತಾನಿ ಭವನ್ತಿ। ಕಾರ್ಪಾಸಿಕಂ ವಸ್ತ್ರಂ ಲಘು, ಔರ್ಣಂ ತು ಗುರು। ಕಾರ್ಪಾಸಿಕಾಃ ಪಟಾ ಅಲ್ಪಾರ್ಘಾಃ। ಔರ್ಣಾನಿ ತು ಮಹಾರ್ಘಾಃ। ತಸ್ಮಾತ್ಕಾರ್ಪಾಸಿಕಮೇವ ವಸನಂ ಬಹೂನಾಂ ಜನಾನಂ ಸುಲಭಮ್॥

ಹತ್ತೊಂಬತ್ತನೆಯ ಪಾಠ

ಈ ಬಟ್ಟೆ ದಪ್ಪ. ಇಲ್ಲಿ ಎರಡು ಬಟ್ಟೆಗಳಿವೆ. ಅವು ದಪ್ಪವೊ, ತೆಳುವೊ? ಎರಡೂ ದಪ್ಪ. ನಿನ್ನ ಬಟ್ಟೆಗಳೆಲ್ಲವೂ ದಪ್ಪ. ಆದರೆ ನನ್ನ ಪಂಚೆ ತೆಳುವು. ಗೋವಿಂದನ ಮತ್ತು ಗೋಪಾಲನ ಪಂಚೆಗಳೆರಡೂ ತೆಳುವು. ಈ ಪಂಚೆಗಳೆಲ್ಲಾ ತೆಳುವೇನು? ಅಲ್ಲ, ಕೆಲವು ದಪ್ಪನೆಯವೂ ಇವೆ. ಈ ವಸ್ತ್ರವು ಬಾಳಿಕೆ ಬರುವಂಥದ್ದು. ಮನೆಯೊಳಗೆ ಎರಡು ವಸ್ತ್ರಗಳು ಇವೆ. ಅವೆರಡೂ ಬಾಳಿಕೆ ಬರುವವಲ್ಲ. ನಮ್ಮ ದೇಶದ ವಸ್ತ್ರಗಳೆಲ್ಲವೂ ಬಾಳಿಕೆ ಬರತಕ್ಕವೇನು? ಬೇಸಗೆಯಲ್ಲಿ ಹತ್ತಿಯ ವಸ್ತ್ರಗಳು ಸುಖವಾಗಿರುತ್ತವೆ. ಉಣ್ಣೆಯ ಬಟ್ಟೆಗಳಾದರೋ ಚಳಿಗಾಲದಲ್ಲಿ ಹಿತವಾಗಿರುತ್ತವೆ. ಹತ್ತಿಯ ವಸ್ತ್ರವು ಹಗುರ, ಉಣ್ಣೆಯದಾದರೋ ಭಾರ. ಹತ್ತಿಯ ಬಟ್ಟೆಗಳು ಅಗ್ಗ. ಉಣ್ಣೆಯವಾದರೋ ಬಹಳ ಬೆಲೆ. ಆದ್ದರಿಂದ ಹತ್ತಿಯ ಉಡುಪೇ ಬಹುಜನರಿಗೆ ಸುಲಭವಾಗಿ ದೊರಕುವಂಥದ್ದು.

---

1. ಕಾಶ್ಚಿತ್ + ಸ್ಥೂಲಾಃ
2. ಗೃಹಸ್ಯ + ಅನ್ತಃ + ದ್ವೇ. ವಿಶೇಷ್ಯದ ವಚನವೇ ವಿಶೇಣಕ್ಕೂ ಬರುವುದು.
3. ಸರ್ವಾಣಿ + ಅಪಿ

ವಿಂಶಃ ಪಾಠಃ

ಇದಂ ಕ್ರೀಡಾಙ್ಗಣಮ್। ಏತದ್ಬಹುವಿಶಾಲಮಸ್ತಿ[1] । ಗೃಹಂ ತ್ವಲ್ಪವಿಸ್ತಾರಮ್।[2] ತಸ್ಮಾದತ್ರೈವ[3] ಕ್ರೀಡಾಮಃ। ಯೂಯಂ ತಾವತ್ ಕ್ರೀಡತ। ವಯಂ ಪಶ್ಯಾಮಃ। ಏವಮೇವ ಭವತು। ಕನ್ದುಕಮಾನಯತ। ರಾಮ, ಮಹ್ಯಂ ಕನ್ದುಕಂ ದೇಹಿ। ಕನ್ದು-ಕಯಷ್ಟಿಃ ಕುತ್ರ ವರ್ತತೇ? ಅಸೌ ದಣ್ಡೋ ವಕ್ರಃ। ಋಜುಮೇಕಂ ದಣ್ಡಮಾನಯ। ಇಯಂ ಯಷ್ಟಿರ್ಭ[4] ವಿಷ್ಯತಿ। ಸಾ ಋಜ್ವೀ ವರ್ತತೇ। ಅಸ್ತ್ವೇವಮ್[5] । ಕೃಷ್ಣ ತ್ವಂ ತತ್ರ ತಿಷ್ಠ। ವಯಂ ದೂರಂ ಗಚ್ಛಾಮಃ। ಯೂಯಂ ಸರ್ವೇ ತತ್ರ ತತ್ರ ತಿಷ್ಠತ। ಇದಾನೀಮಹಂ ಕನ್ದುಕಂ ರಾಮಂ ಪ್ರತಿ ಪ್ರಕ್ಷಿಪಾಮಿ। ಪಶ್ಯತ, ಅಧುನಾ ಕನ್ದುಕೋ ವೇಗೇನ ಗಚ್ಛತಿ। ರಾಮಸ್ತಮವಲೋಕತೇ[6] । ಇದಾನೀಂ ಯಷ್ಟ್ಯಾ ತಾಡಯತಿ। ಪ್ರತ್ಯಾಗತಃ ಕನ್ದುಕಃ। ಗೃಹ್ಣೀತ, ಗೃಹ್ಣೀತ। ಧಾವತ, ಕನ್ದುಕಃ ಪ್ರಾಕಾರಂ ಘಟ್ಟಯತಿ। ಇದಾನೀಂ ವಯಮುಪವಿಶಾಮಃ। ವಯಂ ಶ್ರಾನ್ತಾಃ। ಯೂಯಂ ಕ್ರೀಡತ। ಅಲಂ ಖೇಲನೇನ[7] । ಗೃಹಂ ಗಚ್ಛಾಮಃ॥

ಇಪ್ಪತ್ತನೆಯ ಪಾಠ

ಇದು ಆಟದ ಬಯಲು. ಇದು ಬಹುವಿಶಾಲವಾಗಿ ಇದೆ. ಮನೆ ಯಾದರೋ ಸಣ್ಣದು. ಆದ್ದರಿಂದ ಇಲ್ಲಿಯೇ ಆಡೋಣ. ನೀವು ಮೊದಲು ಆಡಿ. ನಾವು ನೋಡುತ್ತೇವೆ. ಹಾಗೆಯೇ ಆಗಲಿ. ಚೆಂಡು

---

1. ಏತತ್ + ಬಹುವಿಶಾಲಂ + ಅಸ್ತಿ
2. ಗೃಹಂ + ತು + ಅಲ್ಪವಿಸ್ತಾರಂ
3. ತಸ್ಮಾತ್ + ಅತ್ರ + ಏವ
4. ಯಷ್ಟಿಃ + ಭವಿಷ್ಯತಿ
5. ಅಸ್ತು + ಏವಂ
6. ರಾಮಃ + ತಂ
7. "ಅಲಂ" ಇದ್ದರೆ ತೃತೀಯ ಬೇಕು.

ತನ್ನಿರಿ. ರಾಮ, ನನಗೆ ಚೆಂಡು ಕೊಡು. ಚೆಂಡಿನ ದಾಂಡು ಎಲ್ಲಿ ಇದೆ? ಈ ಕೋಲು ಡೊಂಕಾಗಿದೆ. ನೆಟ್ಟಗಿರುವದೊಂದು ಕೋಲನ್ನು ತಾ. ಈ ದಾಂಡು ಆಗುವದು. ಅದು ನೆಟ್ಟಗೆ ಇದೆ. ಹಾಗೇ ಆಗಲಿ. ಕೃಷ್ಣ, ನೀನು ಅಲ್ಲಿ ನಿಲ್ಲು. ನಾವು ದೂರ ಹೋಗುತ್ತೇವೆ. ನೀವೆಲ್ಲರೂ ಅಲ್ಲಲ್ಲಿ ನಿಲ್ಲಿರಿ. ಈಗ ನಾನು ಚೆಂಡನ್ನು ರಾಮನ ಕಡೆಗೆ ಎಸೆಯುತ್ತೇನೆ. ನೋಡಿರಿ, ಈಗ ಚೆಂಡು ವೇಗದಿಂದ ಹೋಗುತ್ತಿದೆ. ರಾಮನು ಅದನ್ನು ನೋಡುತ್ತಾನೆ. ಈಗ ದಾಂಡಿನಿಂದ ಹೊಡೆಯುತ್ತಾನೆ. ಹಿಂತಿರುಗಿ ಬಂತು ಚೆಂಡು. ಹಿಡಿಯಿರಿ, ಹಿಡಿಯಿರಿ, ಓಡಿರಿ, ಚೆಂಡು ಪಾಗಾರದ ಗೋಡೆಗೆ ತಗಲುತ್ತದೆ. ಈಗ ನಾವು ಕೂತುಕೊಳ್ಳುತ್ತೇವೆ. ನಾವು ದಣಿದಿದ್ದೇವೆ. ನೀವು ಆಡಿರಿ. ಸಾಕು ಆಡಿದ್ದು. ಮನೆಗೆ ಹೋಗೋಣ.

ಏಕವಿಂಶಃ ಪಾಠಃ

ಅಸ್ಮಿನ್ ಪಿಟಕೇ ಕತಿ ಫಲಾನಿ ಸನ್ತಿ? ಗಣಯಾಮಿ। ಏಕಂ, ದ್ವೇ, ತ್ರೀಣಿ, ಚತ್ವಾರಿ, ಪಞ್ಚ, ಷಟ್, ಸಪ್ತ, ಅಷ್ಟೌ (ಅಷ್ಟ), ನವ, ದಶ, ಏಕಾದಶ, ದ್ವಾದಶ, ತ್ರಯೋದಶ, ಚತುರ್ದಶ, ಪಞ್ಚದಶ, ಷೋಡಶ, ಸಪ್ತದಶ, ಅಷ್ಟಾದಶ, ಏಕೋನವಿಂಶತಿಃ, ವಿಂಶತಿಃ। ವಿಂಶತಿಃ ಫಲಾನಿ ವರ್ತನ್ತೇ। ಅಪರಸ್ಮಿನ್ ಪಿಟಕೇ ಕತಿ ಸನ್ತಿ? ಚತ್ವಾರಿ ಫಲಾನಿ ವಿದ್ಯನ್ತೇ। ಆಹತ್ಯ ಕತಿ ಜಾತಾನಿ? ಚತುರ್ವಿಂಶತಿಃ ಫಲಾನಿ ಸಮ್ಪನ್ನಾನಿ। ಅಙ್ಗಣೇ ಕತಿ ಬಾಲಿಕಾಃ ಸನ್ತಿ? ಗಣಯಾಮಿ। ಏಕಾ, ದ್ವೇ, ತಿಸ್ರಃ, ಚತಸ್ರಃ, ಪಞ್ಚ, ಷಟ್, ಸಪ್ತ। ಸಪ್ತ ಬಾಲಿಕಾ ವಿದ್ಯನ್ತೇ। ತಾಭ್ಯಃ ಪ್ರತ್ಯೇಕಂ ದ್ವೇ ದ್ವೇ ಫಲೇ ದಾಸ್ಯಾಮಿ। ಇದಾನೀಂ ಕತಿ ಶಿಷ್ಯನ್ತೇ? ದಶ ಶಿಷ್ಯನ್ತೇ। ಅತ್ರ ದಾರುಪೀಠೇ ಕತಿ ಬಾಲಾ ಉಪವಿಶನ್ತಿ? ಏಕಃ, ದ್ವೌ, ತ್ರಯಃ, ಚತ್ವಾರಃ, ಪಞ್ಚ, ಷಟ್। ತೇಭ್ಯ ಏಕೈಕಂ ದಾಸ್ಯಾಮಿ। ಇದಾನೀಂ ಚತ್ವಾರಿ ಶಿಷ್ಯನ್ತೇ। ಮಮ ಕವಚೇ ತ್ರೀಣಿ ಸನ್ತಿ। ಆಹತ್ಯ ಸಪ್ತ ಫಲಾನಿ ಸಮ್ಪದ್ಯನ್ತೇ। ಅಹಮೇಕಂ ಭಕ್ಷಯಾಮಿ। ಛುರಿಕಾ ಕುತ್ರ ವರ್ತತೇ।

ಇಪ್ಪತ್ತೊಂದನೆಯ ಪಾಠ

ಈ ಬುಟ್ಟಿಯಲ್ಲಿ ಎಷ್ಟು ಹಣ್ಣುಗಳಿವೆ? ಎಣಿಸುತ್ತೇನೆ. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಬತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು, ಹದಿನೈದು, ಹದಿನಾರು, ಹದಿನೇಳು, ಹದಿನೆಂಟು, ಹತ್ತೊಂಬತ್ತು, ಇಪ್ಪತ್ತು. ಇಪ್ಪತ್ತು ಹಣ್ಣುಗಳಿವೆ. ಇನ್ನೊಂದು ಬುಟ್ಟಿಯಲ್ಲಿ ಎಷ್ಟು ಇವೆ? ನಾಲ್ಕು ಹಣ್ಣುಗಳಿವೆ. ಸೇರಿದರೆ ಎಷ್ಟು ಆದವು? ಇಪ್ಪತ್ತು ನಾಲ್ಕು ಹಣ್ಣುಗಳಾದವು. ಅಂಗಳದಲ್ಲಿ ಎಷ್ಟು ಹುಡುಗಿಯರು ಇದ್ದಾರೆ? ಎಣಿಸುತ್ತೇನೆ. ಒಬ್ಬಳು, ಇಬ್ಬರು, ಮೂವರು, ನಾಲ್ವರು, ಐದು ಜನ, ಆರು ಜನ, ಏಳು ಜನ. ಏಳು ಹುಡುಗಿಯರು ಇದ್ದಾರೆ. ಅವರಿಗೆ ಒಬ್ಬೊಬ್ಬರಿಗೂ ಎರಡೆರಡು ಹಣ್ಣುಗಳನ್ನು ಕೊಡುತ್ತೇನೆ. ಈಗ ಎಷ್ಟು ಉಳಿದಿವೆ? ಹತ್ತು ಉಳಿದಿವೆ. ಇಲ್ಲಿ ಬೆಂಚಿನ ಮೇಲೆ ಎಷ್ಟು ಹುಡುಗರು ಕೂತಿದ್ದಾರೆ? ಒಬ್ಬನು, ಇಬ್ಬರು, ಮೂವರು, ನಾಲ್ವರು, ಐದು ಜನ, ಆರು ಜನ. ಅವರಿಗೆ ಒಂದೊಂದು ಕೊಡುವೆನು. ಈಗ ನಾಲ್ಕು ಉಳಿದಿವೆ. ನನ್ನ ಅಂಗಿಯಲ್ಲಿ ಮೂರು ಇವೆ. ಸೇರಿದರೆ ಏಳು ಹಣ್ಣುಗಳು ಆಗುವವು. ನಾನು ಒಂದು ತಿನ್ನುತ್ತೇನೆ. ಚಾಕು ಎಲ್ಲಿ ಇದೆ?

ದ್ವಾವಿಂಶಃ ಪಾಠಃ

ಭಾನುವಾಸರಃ, ಇನ್ದುವಾಸರಃ, ಕುಜವಾಸರಃ, ಸೌಮ್ಯವಾಸರಃ, ಗುರುವಾಸರಃ, ಭಾರ್ಗವವಾಸರಃ, ಸ್ಥಿರವಾಸರಃ ಏತೇ ಸಪ್ತ ವಾರಾಃ। ಸಪ್ತಭಿರ್ದಿವಸೈಃ[1] ಸಪ್ತಾಹಃ ಕಥ್ಯತೇ। ದಿವಸಸ್ಯೈವ[2] ಅಹೋರಾತ್ರ ಇತ್ಯಪರಂ[3] ನಾಮ। ಪಞ್ಚದಶಭಿರಹೋ-

---

1. ಸಪ್ತಭಿಃ + ದಿವಸೈಃ
2. ದಿವಸಸ್ಯ + ಏವ
3. ಇತಿ + ಅಪರಂ

ರಾತ್ರೈರೇಕಃ[1] ಪಕ್ಷೋ ಭವತಿ। ದ್ವಾಭ್ಯಾಂ ಪಕ್ಷಾಭ್ಯಾಂ ಏಕೋ ಮಾಸೋ ಭವತಿ। ಪಕ್ಷೋ ದ್ವಿವಿಧಃ। ಶುಕ್ಲಃ ಕೃಷ್ಣಶ್ಚೇತಿ। ತಾವುಭೌ[2] ಪಕ್ಷೌ ಮಿಲಿತ್ವಾ ಮಾಸೋ ಭವತಿ। ದ್ವಾಭ್ಯಾಂ ಮಾಸಾಭ್ಯಾಂ ಚ ಋತುರ್ಭವತಿ। ಋತುಭಿಃ ಷಡ್ಭಿಃ - ದ್ವಾದಶ ಮಾಸೈರ್ವಾ - ಏಕೋ ವತ್ಸರೋ ಭವತಿ। ಮಾಘಫಾಲ್ಗುನ ಚೈತ್ರವೈಶಾಖಜ್ಯೇಷ್ಠಾಷಾಢೈಃ ಷಡ್ಭಿರ್ಮಾಸೈರುತ್ತರಾಯಣಂ ಭವತಿ। ತದಾ ಸೂರ್ಯಸ್ಯೋತ್ತರಾ[3] ಗತಿಃ। ಶ್ರಾವಣಭಾದ್ರಪದಾಶ್ವಿನಕಾರ್ತಿಕಮಾರ್ಗಶೀರ್ಷಪೌಷೈಃ ಷಡ್ಭಿಃ ಪುನರ್ದಕ್ಷಿಣಾಯನಂ[4] ಭವತಿ। ತದಾ ಸೂರ್ಯಸ್ಯ ದಕ್ಷಿಣಾ ಗತಿಃ॥

ಇಪ್ಪತ್ತೆರಡನೆಯ ಪಾಠ

ಆದಿತ್ಯವಾರ, ಸೋಮವಾರ, ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ - ಇವು ಏಳು ವಾರಗಳು. ಏಳು ದಿವಸವಾದರೆ ಒಂದು ಸಪ್ತಾಹ (=ವಾರ.)ಎಂದು ಹೇಳಲ್ಪಡುತ್ತದೆ. ದಿವಸಕ್ಕೇ ಅಹೋರಾತ್ರವೆಂದು ಮತ್ತೊಂದು ಹೆಸರು. ಹದಿನೈದು ಅಹೋರಾತ್ರಗಳಿಗೆ ಒಂದು ಪಕ್ಷವಾಗುವದು. ಎರಡು ಪಕ್ಷಗಳಿಗೆ ಒಂದು ತಿಂಗಳಾಗುವದು. ಪಕ್ಷವು ಎರಡು ಬಗೆ. ಶುಕ್ಲ, ಕೃಷ್ಣ ಎಂದು. ಆ ಎರಡು ಪಕ್ಷಗಳೂ ಸೇರಿದರೆ ತಿಂಗಳಾಗುವದು. ಎರಡು ತಿಂಗಳಿಗೆ ಒಂದು ಋತುವಾಗುವದು. ಋತುಗಳು ಆರಕ್ಕೆ - ಅಥವಾ ಹನ್ನೆರಡು ತಿಂಗಳಿಗೆ - ಒಂದು ವರ್ಷವಾಗುತ್ತದೆ. ಮಾಘ, ಫಾಲ್ಗುನ, ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ - ಎಂಬ ಆರು ಮಾಸಗಳಿಗೆ ಉತ್ತರಾಯಣವಾಗು-

1. ಪಂಚದಶಭಿಃ + ಅಹೋರಾತ್ರೈಃ + ಏಕಃ,

2. ತೌ + ಉಭೌ

3. ಸೂರ್ಯಸ್ಯ + ಉತ್ತರಾ

4. ಪುನಃ + ದಕ್ಷಿಣಾಯನಂ ಈ ಪಾಠದಲ್ಲಿ ದಿವಸೈಃ, ಅಹೋರಾತ್ರೈಃ, ಮಾಸಾಭ್ಯಾಂ - ಮುಂತಾದ ತೃತೀಯೆಗಳಿಗೆ ಕನ್ನಡದಲ್ಲಿ ಚತುರ್ಥಿಯ ಅರ್ಥ.

ವದು. ಆಗ ಸೂರ್ಯನಿಗೆ ಉತ್ತರಗಮನವು. ಆದರೆ ಶ್ರಾವಣ, ಭಾದ್ರಪದ, ಆಶ್ವಿನ, ಕಾರ್ತಿಕ, ಮಾರ್ಗಶೀರ್ಷ, ಪೌಷ - ಎಂಬ ಆರಕ್ಕೆ ದಕ್ಷಿಣಾಯನವಾಗುವದು. ಆಗ ಸೂರ್ಯನಿಗೆ ದಕ್ಷಿಣಗತಿಯು.

ತ್ರಯೋವಿಂಶಃ ಪಾಠಃ

ಅಸ್ಮಿನ್ ಪುಸ್ತಕೇ ಕತಿ ಪಾಠಾಃ ಸನ್ತಿ? ಅದ್ಯ ಯಾವತ್ ಕತಿ ವೃತ್ತಾಃ? ಅತಃ ಪರಂ ಕತ್ಯಾಗಮಿಷ್ಯನ್ತಿ[1] ? ಅಸ್ಮಿನ್ ಪುಸ್ತಕೇ ತ್ರಿಂಶತ್ ಪಾಠಾಃ ಸನ್ತಿ। ಅದ್ಯ ಪರ್ಯನ್ತಂ ದ್ವಾವಿಂಶತಿಃ ಪಾಠಾ ವೃತ್ತಾಃ। ಅತಃ ಪರಂ ಅಷ್ಟಾಗಮಿಷ್ಯನ್ತಿ[2] । ಕಿಂ ಮಾಸೇನ ಪುಸ್ತಕಂ ಪೂರ್ಣಂ ಭವಿಷ್ಯತಿ? ಮನ್ಯೇ ಪೂರ್ಣಂ ಭವಿಷ್ಯತೀತಿ।[3] ಕತಿಭಿರಹೋರಾತ್ರೈರೇಕೋ ಮಾಸೋ ಭವತಿ? ತ್ರಿಂಶತಾ ದಿವಸೈರ್ಮಾಸೋ ಭವತಿ। ಇದಾನೀಂ ಕೋ ಮಾಸಃ? ಕೋ ವಾ ಪಕ್ಷಃ? ಅದ್ಯ ಕೋ ವಾಸರಃ? ಇದಾನೀಂ ಫಾಲ್ಗುನೋ ಮಾಸಃ, ಶುಕ್ಲಃ ಪಕ್ಷಃ। ಅದ್ಯ ಸ್ಥಿರವಾಸರಃ। ಶ್ವಃ ಕೋ ವಾರೋ ಭವಿಷ್ಯತಿ? ಶ್ವೋ ಭಾನುವಾಸರೋ ಭವಿಷ್ಯತಿ। ಕಸ್ಮಿನ್ ವಾಸರೇ ಸಂಸ್ಕೃತಪಾಠೋ ನ ಭವಿಷ್ಯತಿ? ಸೋಮವಾಸರೇ ಚತುರ್ದಶೀ ಭವಿಷ್ಯತಿ। ಅತಃ ಸಂಸ್ಕೃತಪಾಠೋ ತದಾನೀಂ ನ ಭವಿಷ್ಯತಿ। ಕದಾ ಸೋಮವಾಸರಃ? ಪರಶ್ವಃ ಸೋಮವಾಸರಃ । ಹ್ಯಃ ಕುಜವಾಸರಃ ಕಿಂ? ನ, ಭಾರ್ಗವವಾಸರಃ॥

ಇಪ್ಪತ್ತಮೂರನೆಯ ಪಾಠ

ಈ ಪುಸ್ತಕದಲ್ಲಿ ಎಷ್ಟು ಪಾಠಗಳು ಇವೆ? ಈವರೆಗೆ ಎಷ್ಟು ಆದವು? ಇನ್ನು ಮೇಲೆ ಎಷ್ಟು ಬರುವವು? ಈ ಪುಸ್ತಕದಲ್ಲಿ ಮೂವತ್ತು ಪಾಠ-

1. ಕತಿ + ಆಗಮಿಷ್ಯನ್ತಿ.
2. ಅಷ್ಟ + ಆಗಮಿಷ್ಯನ್ತಿ
3. ಭವಿಷ್ಯತಿ + ಇತಿ.

ಗಳು ಇವೆ. ಈವರೆಗೆ ಇಪ್ಪತ್ತೆರಡು ಪಾಠಗಳು ಆದವು. ಇನ್ನು ಮೇಲೆ ಎಂಟು ಬರುವವು. ತಿಂಗಳೊಳಗೆ ಪುಸ್ತಕವು ಪೂರ್ಣವಾಗುವದೊ? ಪೂರ್ಣವಾಗುವದೆಂದು ತಿಳಿಯುತ್ತೇನೆ (= ಮುಗಿಯುವದೆಂತ ತೋರುತ್ತದೆ). ಎಷ್ಟು ದಿನಗಳಿಗೆ ಒಂದು ತಿಂಗಳು ಆಗುತ್ತದೆ? ಮೂವತ್ತು ದಿನಗಳಿಗೆ ತಿಂಗಳಾಗುತ್ತದೆ. ಈಗ ಯಾವ ತಿಂಗಳು? ಪಕ್ಷವಾದರೂ ಯಾವದು? ಇಂದು ಯಾವ ವಾರ? ಈಗ ಫಾಲ್ಗುನ ಮಾಸ, ಶುಕ್ಲ-ಪಕ್ಷ. ಇಂದು ಶನಿವಾರ. ನಾಳೆ ಯಾವ ವಾರವಾಗುವದು? ನಾಳೆ ಭಾನುವಾರವಾಗುವದು. ಯಾವ ವಾರ ಸಂಸ್ಕೃತ ಪಾಠವು ಆಗುವದಿಲ್ಲ? ಸೋಮವಾರ ಚತುರ್ದಶಿಯಾಗುವದು. ಆದ್ದರಿಂದ ಸಂಸ್ಕೃತ-ಪಾಠವು ಆಗ ಆಗುವದಿಲ್ಲ. ಯಾವಾಗ ಸೋಮವಾರ? ನಾಡಿದ್ದು ಸೋಮವಾರ. ನಿನ್ನೆ ಮಂಗಳವಾರವೇನು? ಅಲ್ಲ, ಶುಕ್ರವಾರ.

ಚತುರ್ವಿಂಶಃ ಪಾಠಃ

ಇದಂ ಕಸ್ಯ ಮಷೀಪಾತ್ರಂ? ಇಯಂ ರಾಮಸ್ಯ ಮಷೀಧಾನೀ। ತಸ್ಯ ಲೇಖನೀ ಕುತ್ರ ವರ್ತತೇ? ಸಾ ಪೀಠಸ್ಯೋಪರಿ[1] ವರ್ತತೇ। ತವ ಸೀಸಕಲೇಖನೀ ಕುತ್ರಾಸ್ತಿ? ಮಮ ಕವಚಸ್ಯ ಕೋಶೇ ವರ್ತತೇ। ತತ್ರ ಛುರಿಕಾಪ್ಯಸ್ತಿ।[2] ಛುರಿಕಾಯಾಃ ಕೋಽರ್ಘಃ? ತಸ್ಯಾಃ ಷಡಾಣಕಾಃ। ಅಧ್ಯಾಪಕಃ ಕೇನ ಲಿಖತಿ? ಸ ಕಠಿನೀಖಣ್ಡೇನ ಲೇಖನಫಲಕೇ ಲಿಖತಿ। ತದನು ವಯಂ ಶಿಲಾಫಲಕೇ ಪುಸ್ತಕೇ ವಾ ಲಿಖಾಮಃ। ಶಿಲಾಫಲಕೇ ಶಿಲಾಲೇಖನ್ಯಾ ಲಿಖಾಮಃ। ಪುಸ್ತಕೇ ತು ಸೀಸಕ ಲೇಖನ್ಯಾ ಲಿಖಾಮಃ। ಇದಂ ಲೇಖನಪೀಠಮ್। ತಸ್ಯೋಪರಿ ಕಠಿನೀ ವರ್ತತೇ। ತಸ್ಯ ಸಮೀಪೇ ವಸ್ತ್ರಖಣ್ಡೋಽಪಿ[3] ವಿದ್ಯತೇ। ಅಧ್ಯಾಪಕಸ್ಯ ಪುರತಃ ಕಿಂ ವರ್ತತೇ?

1. ಪೀಠಸ್ಯ + ಉಪರಿ
2. ಛುರಿಕಾ + ಅಪಿ + ಅಸ್ತಿ
3. ವಸ್ತ್ರ ಖಣ್ಡಃ + ಅಪಿ

ದಾರುಫಲಕಮಸ್ತಿ। ತಸ್ಯ ಪಶ್ಚಾತ್ತು ಕಿಂ ವಿದ್ಯತೇ? ಆಸನ್ದೀ ವರ್ತತೇ। ತಸ್ಯ ಸವ್ಯತಃ ಪೇಟಿಕಾ ವಿದ್ಯತೇ। ದಕ್ಷಿಣತಃ ಕಿಮಪಿ ನಾಸ್ತಿ॥

ಇಪ್ಪತ್ತನಾಲ್ಕನೆಯ ಪಾಠ

ಇದು ಯಾರ ಮಸೀಕುಡಿಕೆ? ಇದು ರಾಮನ ದೌತಿ. ಅವನ ಲೇಖಿನಿ ಎಲ್ಲಿ ಇದೆ? ಅದು ಪೀಠದ ಮೇಲೆ ಇದೆ. ನಿನ್ನ ಸೀಸಕಡ್ಡಿ ಎಲ್ಲಿದೆ? ನನ್ನ ಅಂಗಿಯ ಜೇಬಿನಲ್ಲಿದೆ. ಅಲ್ಲಿ ಚಾಕೂ ಸಹಾ ಇದೆ. ಚಾಕುವಿಗೆ ಏನು ಬೆಲೆ? ಅದಕ್ಕೆ ಆರು ಆಣೆ. ಉಪಾಧ್ಯಾಯನು ಏತರಿಂದ ಬರೆಯುತ್ತಾನೆ? ಆತನು ಸೀಮೆಯ ಸುಣ್ಣದ ಚೂರಿನಿಂದ ಬರೆಯುವ ಹಲಗೆಯ ಮೇಲೆ ಬರೆಯುತ್ತಾನೆ. ಆಮೇಲೆ ನಾವು ಕಲ್ಲು ಹಲಗೆಯಲ್ಲಿ (= ಸ್ಲೇಟಿನಲ್ಲಿ) ಅಥವಾ ಪುಸ್ತಕದಲ್ಲಿ ಬರೆಯುತ್ತೇವೆ. ಸ್ಲೇಟಿನಲ್ಲಿ ಬಳಪದಿಂದ ಬರೆಯುತ್ತೇವೆ. ಆದರೆ ಪುಸ್ತಕದಲ್ಲಿ ಸೀಸದಕಡ್ಡಿಯಿಂದ ಬರೆಯುತ್ತೇವೆ. ಇದು ಬರೆಯುವ ಮೇಜು. ಆದರ ಮೇಲೆ ಸೀಮೆಯ ಸುಣ್ಣವಿದೆ. ಅದರ ಹತ್ತಿರ ಬಟ್ಟೆಯೂ (ಚೌಕವೂ) ಇದೆ. ಉಪಾಧ್ಯಾಯನ ಮುಂದೆ ಏನು ಇದೆ? ಮರದ ಹಲಗೆ ಇದೆ. ಆದರೆ ಆತನ ಹಿಂದೆ ಏನು ಇದೆ? ಕುರ್ಚಿ ಇದೆ. ಆತನ ಎಡಕ್ಕೆ ಪೆಟ್ಟಿಗೆ ಇದೆ. ಬಲಕ್ಕೆ ಏನೂ ಇಲ್ಲ.

ಪಞ್ಚವಿಂಶಃ ಪಾಠಃ

ಇದಂ ಕೋಷ್ಠಾಗಾರಮ್। ಅತ್ರಾನೇಕೇ[1] ಮೂಷಕಾ ವರ್ತನ್ತೇ। ಏತೇ ಧಾನ್ಯಾನಿ ಖಾದನ್ತಿ। ವಸ್ತ್ರಾಣಿ ದಶನ್ತಿ। ವಿವಿಧಾಂ ಪೀಡಾಮಾವಹನ್ತಿ। ಮಾರ್ಜಾರೋ ಮೂಷ-ಕಾನ್ ಪಶ್ಯತಿ। ತೇಽಪಿ ಮಾರ್ಜಾರಮವಲೋಕನ್ತೇ। ಸರ್ವೇ ಭೀತಾಃ ಪಲಾಯನ್ತೇ।

1. ಅತ್ರ + ಅನೇಕೇ.

ಮಾರ್ಜಾರೋ ಬಹಿರಾಗಚ್ಛತಿ[1] । ಕುಕ್ಕುರಸ್ತಂ ಪಶ್ಯತಿ। ಪಶ್ಯ, ಮಾರ್ಜಾರೋ ವೃಕ್ಷಮಾರೋಹತಿ। ಕುಕ್ಕುರ ಉಚ್ಚೈರ್ಭಷತಿ। ಗರ್ದಭಶ್ಚೀತ್ಕರೋತಿ। ಗೃಹಸ್ವಾಮಿೂ ಬಹಿರಾಗಚ್ಛತಿ। ಲಗುಡೇನ ಗರ್ದಭಂ ತಾಡಯತಿ। ಗರ್ದಭಃ ಪಲಾಯತೇ। ಬಾಲಕಾಸ್ತಮನುಧಾವನ್ತಿ[2] । ಮಾರ್ಗೇ ಮಹಿಷೀಃ ಪಶ್ಯನ್ತಿ, ಮಹಿಷಾನ್ ಪಶ್ಯನ್ತಿ, ಗಾಃ ಪಶ್ಯನ್ತಿ, ವೃಷಭಾನ್ ಪಶ್ಯನ್ತಿ। ಅನ್ಯಾಂಶ್ಚ[3] ಪ್ರಾಣಿನಃ ಪಶ್ಯನ್ತಿ। ಸರ್ವಾನಪಿ ತಾನ್ ಭೀಷಯನ್ತಿ। ಕೋಲಾಹಲಂ ಕುರ್ವನ್ತಿ। ವೃದ್ಧಸ್ತಾನ್ ಬಾಲಕಾನ್ ಸನ್ತರ್ಜಯತಿ। ತೇ ಸರ್ವೇ ಗೃಹಂ[4] ಗಚ್ಛನ್ತಿ॥

ಇಪ್ಪತ್ತೈದನೆಯ ಪಾಠ

ಇದು ಉಗ್ರಾಣದ ಮನೆ. ಇಲ್ಲಿ ಬಹಳ ಇಲಿಗಳು ಇವೆ. ಇವು ಧಾನ್ಯಗಳನ್ನು ತಿನ್ನುತ್ತವೆ. ಬಟ್ಟೆಗಳನ್ನು ಅಗಿಯುತ್ತವೆ. ವಿಧವಿಧವಾದ ತೊಂದರೆಯನ್ನುಂಟುಮಾಡುತ್ತವೆ. ಬೆಕ್ಕು ಇಲಿಗಳನ್ನು ನೋಡುತ್ತದೆ. ಅವೂ ಬೆಕ್ಕನ್ನು ನೋಡುತ್ತವೆ. ಎಲ್ಲವೂ ಹೆದರಿದವಾಗಿ ಓಡುತ್ತವೆ. ಬೆಕ್ಕು ಹೊರಗೆ ಬರುತ್ತದೆ. ನಾಯಿ ಅದನ್ನು ನೋಡುತ್ತದೆ. ನೋಡು, ಬೆಕ್ಕು ಮರವನ್ನು ಏರುತ್ತದೆ. ನಾಯಿ ಗಟ್ಟಿಯಾಗಿ ಬೊಗಳುತ್ತದೆ. ಕತ್ತೆ ಅರಚುತ್ತದೆ. ಮನೆಯ ಯಜಮಾನನು ಹೊರಗೆ ಬರುತ್ತಾನೆ. ದೊಣ್ಣೆಯಿಂದ ಕತ್ತೆಯನ್ನು ಹೊಡೆಯುತ್ತಾನೆ. ಕತ್ತೆ ಓಡುತ್ತದೆ. ಹುಡುಗರು ಅದರ ಹಿಂದೆ ಓಡುತ್ತಾರೆ. ದಾರಿಯಲ್ಲಿ ಎಮ್ಮೆಗಳನ್ನು ನೋಡುತ್ತಾರೆ, ಕೋಣಗಳನ್ನು ನೋಡುತ್ತಾರೆ, ಹಸುಗಳನ್ನು ನೋಡು-

1. ಬಹಿಃ + ಆಗಚ್ಛತಿ

2. ಬಾಲಕಾಃ + ತಂ + ಅನು

3. ಅನ್ಯಾನ್ + ಚ. ಇಲ್ಲಿ ಮಹಿಷೀಶ್ಚ ಮಹಿಷಾಂಶ್ಚ ಗಾಶ್ಚ ವೃಷಭಾಂಶ್ಚ, ಅನ್ಯಾನ್ ಪ್ರಾಣಿನಶ್ಚ - ಎಂದು ಚಕಾರವನ್ನು ಎಲ್ಲಕ್ಕೂ ಸೇರಿಸಿಯೂ ಹೇಳಬಹುದು.

4. ಎಲ್ಲಿಗೆ ಹೋಗುತ್ತೇವೊ ಅದನ್ನು ಹೇಳುವದಕ್ಕೆ ದ್ವಿತೀಯಾ ಬೇಕು.

ತ್ತಾರೆ, ಎತ್ತುಗಳನ್ನು ನೋಡುತ್ತಾರೆ. ಮಿಕ್ಕ ಪ್ರಾಣಿಗಳನ್ನೂ ನೋಡು-ತ್ತಾರೆ. ಅವೆಲ್ಲವನ್ನೂ ಹೆದರಿಸುತ್ತಾರೆ. ಗದ್ದಲ ಮಾಡುತ್ತಾರೆ. ಮುದುಕನು ಆ ಹುಡುಗರನ್ನು ಗದರಿಸುತ್ತಾನೆ. ಅವರೆಲ್ಲರೂ ಮನೆಗೆ ಹೋಗುತ್ತಾರೆ.

ಷಡ್ವಿಂಶಃ ಪಾಠಃ

ಇದಂ ಕುಡ್ಯಂ ಶುಕ್ಲಮ್। ಇಯಂ ಲೇಖನಪತ್ರಿಕಾಪಿ ಶುಕ್ಲಾ[1] । ಏಷ ಕೃಷ್ಣಸ್ಯ ಕಮ್ಬಲಃ । ಅಸಾವಪಿ[2] ಶುಕ್ಲಃ। ಅಸ್ಯ ಕೇಶಾಃ ಕೃಷ್ಣಾಃ। ಶಿಲಾಫಲಕಮಪಿ ಕೃಷ್ಣಮೇವ। ಪತ್ರೇ ಲಿಪಿಃ ಕಿಂವರ್ಣಾ[3] ? ಸಾಪಿ ಕೃಷ್ಣೈವ[4] । ಅತ್ರ ಪಶ್ಯತ। ಏಕಾ ಸೀಸಕಲೇಖಿನೀ ವರ್ತತೇ। ಇಯಂ ನೀಲಾ। ಇಹಾಸ್ತ್ಯನ್ಯಾ[5] । ಸಾ ಲೋಹಿತಾ। ಗೋವಿನ್ದ, ತ್ವಮೇಕಂ ಶುಕ್ಲಂ ವಸ್ತು ಕಥಯ। ಅಯಂ ಪಟಃ ಶುಕ್ಲಃ। ಕ್ಷೀರಮಪಿ ಶುಕ್ಲಂ? ಏವಮ್। ಗೋಪಾಲ, ತ್ವಮೇಕಂ ನೀಲಂ ಪದಾರ್ಥಂ ಕಥಯ। ಆಕಾಶೋ ನೀಲವರ್ಣಃ। ಅಸ್ಯ ಪುಸ್ತಕಸ್ಯ ರಕ್ಷಾಪತ್ರಂ ಕಿಂವರ್ಣಮ್? ನೀಲಂ ಲೋಹಿತಂ ವಾ? ತಲ್ಲೋಹಿತಮ್[6] । ಲೇಖನಪೀಠಂ ಕಿಂ ವರ್ಣಂ? ತತ್ಕಪಿಶವರ್ಣಮ್। ಅಙ್ಗಣೇ ವಾಲುಕಾ ವಿದ್ಯತೇ। ಸಾ ಕಿಂವರ್ಣಾ? ಸಾಪಿ ಕಪಿಶಾ। ಘಾಸಃ ಕಿಂವರ್ಣಃ? ಸ ಹರಿತಃ। ಅಸ್ಯ ವೃಕ್ಷಸ್ಯ ಸ್ಕನ್ಧಃ ಕಿಂವರ್ಣಃ? ಶಾಖಾಃ ಕಿಂವರ್ಣಾಃ? ತಸ್ಯ ಪರ್ಣಾನಿ ಕಿಂವರ್ಣಾನಿ?

---

1. ಶುಕ್ಲ - ಕೃಷ್ಣ, ಮುಂತಾದವು ಬಣ್ಣವುಳ್ಳ ವಸ್ತುವಿಗೆ ಹೆಸರಾದಾಗ ಲಿಂಗಾನುಸಾರ ಬದಲಾಯಿಸುವವು; ಬಣ್ಣದ ಹೆಸರಾದರೆ ಪುಲ್ಲಿಂಗ.
2. ಅಸೌ + ಅಪಿ
3. ಕಿಂವರ್ಣಃ, ಕಿಂವರ್ಣಾ, ಕಿಂವರ್ಣಂ ಎಂದು ಲಿಂಗಾನುಸಾರ ಕೇಳಬೇಕು.
4. ಕೃಷ್ಣಾ + ಏವ.
5. ಇಹ + ಅಸ್ತಿ + ಅನ್ಯಾ.
6. ತತ್ + ಲೋಹಿತಂ.

ಇಪ್ಪತ್ತಾರನೆಯ ಪಾಠ

ಈ ಗೋಡೆ ಬಿಳಿಯದು. ಈ ಬರೆಯುವ ಕಾಗದವೂ ಬಿಳಿಯದು. ಇದು ಕೃಷ್ಣನ ಕಂಬಳಿ. ಅದೂ ಬಿಳಿಯದು. ಇವನ ಕೂದಲು ಕಪ್ಪು. ಸ್ಲೇಟೂ ಕಪ್ಪೇ. ಕಾಗದದಲ್ಲಿ ಬರೆದ ಅಕ್ಷರವು ಯಾವ ಬಣ್ಣ? ಅದೂ ಕಪ್ಪೇ. ಇಲ್ಲಿ ನೋಡಿ. ಒಂದು ಸೀಸಕಡ್ಡಿ ಇದೆ. ಇದು ನೀಲ. ಇಲ್ಲಿ ಇನ್ನೊಂದಿದೆ. ಅದು ಕೆಂಪು. ಗೋವಿಂದ, ನೀನು ಒಂದು ಬಿಳಿಯ ವಸ್ತುವನ್ನು ಹೇಳು. ಈ ಬಟ್ಟೆ ಬಿಳಿಯದು. ಹಾಲೂ ಬಿಳಿಯದೋ? ಹೌದು. ಗೋಪಾಲ, ನೀನು ಒಂದು ನೀಲ ಪದಾರ್ಥವನ್ನು ಹೇಳು. ಆಕಾಶವು ನೀಲಬಣ್ಣ. ಈ ಪುಸ್ತಕದ ರಟ್ಟಿನ ಕಾಗದವು ಯಾವ ಬಣ್ಣ? ನೀಲವೋ ಕೆಂಪೋ? ಅದು ಕೆಂಪು. (ಬರೆಯುವ) ಮೇಜು ಯಾವ ಬಣ್ಣ? ಅದು ಕಂದು ಬಣ್ಣ. ಅಂಗಳದಲ್ಲಿ ಮರಳು ಇದೆ. ಅದು ಯಾವ ಬಣ್ಣ? ಅದೂ ಕಂದು. ಹುಲ್ಲು ಯಾವ ಬಣ್ಣ? ಅದು ಹಸುರು. ಈ ಮರದ ಬುಡ ಯಾವ ಬಣ್ಣ? ಕೊಂಬೆಗಳು ಯಾವ ಬಣ್ಣ? ಅದರ ಎಲೆಗಳು ಯಾವ ಬಣ್ಣ?

ಸಪ್ತವಿಂಶಃ ಪಾಠಃ

ಅಯಂ ಗೋಪಾಲಃ। ಸ ಕಿಂ ಕರೋತಿ? ಗಾಂ ಕ್ಷೀರಂ ದೋಗ್ಧಿ। ಕ್ಷೀರಂ ಪಿತ್ತಲಕಲಶೇ ಗೃಹ್ಣಾತಿ। ಪಶ್ಯ, ಇಯಂ ಗೌರ್ನೈವ[1] ಚಲತಿ। ತೂಷ್ಣೀಂ ತಿಷ್ಠತಿ। ಅಹೋ। ಅತೀವ[2] ದಾನ್ತಾ ಗೌಃ। ಗೋಪಾಲೋ ದಕ್ಷಿಣೇನ ಪಾಣಿನಾ ಕ್ಷೀರಂ ದೋಗ್ಧಿ। ಸವ್ಯೇನ ಪಾಣಿನಾ ಪಾತ್ರಂ ಧಾರಯತಿ। ಗೋಃ ಸಮೀಪೇ ವತ್ಸೋಽಪಿ ತಿಷ್ಠತಿ। ವತ್ಸಃ ಕಿಂ ಕರೋತಿ? ಸ್ವಸ್ಯ ಮಾತುಃ ಕ್ಷೀರಂ ಪಿಬತಿ। ಗೋಃ ಶಿರಸಿ

1. 'ನೈವ ಚಲತಿ' - ಎದನ್ನು 'ನ ಚಲತ್ಯೇವ' ಎಂದೂ ಹೇಳಬಹುದು.
2. 'ಗೌರತೀವ ದಾನ್ತಾ' - ಎಂದೂ ಹೇಳಬಹುದು.

ದ್ವೇ ಶೃಙ್ಗೇ ವರ್ತೇತೇ। ವತ್ಸೋ ಗೋರ್ಬಿಭೇತಿ[1] ಕಿಂ? ನ, ಸ ಧೀರಂ ಮಾತರಮವಲೋಕತೇ। ಸಾಪಿ ತಂ ಸ್ನೇಹೇನ ವೀಕ್ಷತೇ। ಪಶ್ಯ, ವತ್ಸಃ ಪುಚ್ಛಂ ಚಾಲಯತಿ। ಗೋಪಾಲಃ ಶಾದ್ವಲೇ ಗಾಂ ಚಾರಯತಿ। ಸಾಯಂಕಾಲೇ ತಾಂ ಗ್ರಾಮಂ ನಯತಿ। ಪುನರಪಿ ಗೌಃ ಪ್ರಭೂತಂ ಕ್ಷೀರಂ ದಾಸ್ಯತಿ॥

ಇಪ್ಪತ್ತೇಳನೆಯ ಪಾಠ

ಇವನು ಗೋಪಾಲನು. ಅವನು ಏನು ಮಾಡುತ್ತಾನೆ? ಹಸುವನ್ನು (ಹಾಲು)ಕರೆಯುತ್ತಾನೆ. ಹಾಲನ್ನು ಹಿತ್ತಾಳೆಯ ತಂಬಿಗೆಯಲ್ಲಿ ಹಿಡಿಯುತ್ತಾನೆ. ನೋಡು, ಈ ಹಸು ಅಲ್ಲಾಡುವುದೇ ಇಲ್ಲ. ಸುಮ್ಮನೆ ನಿಂತಿದೆ. ಆಹಾ! ಹಸು ಬಹಳ ಸಾಧು. ಗೋಪಾಲನು ಬಲದ ಕೈಯಿಂದ ಹಾಲನ್ನು ಕರೆಯುತ್ತಾನೆ. ಎಡಗೈಯಿಂದ (=ಎಡಗೈಯಲ್ಲಿ) ಪಾತ್ರೆಯನ್ನು ಹಿಡಿದುಕೊಂಡಿದ್ದಾನೆ. ಹಸುವಿನ ಹತ್ತಿರ ಕರುವೂ ನಿಂತಿದೆ. ಕರು ಏನು ಮಾಡುತ್ತಿದೆ? ತನ್ನ ತಾಯಿಯ ಹಾಲನ್ನು ಕುಡಿಯುತ್ತಿದೆ. ಹಸುವಿನ ತಲೆಯ ಮೇಲೆ ಎರಡು ಕೋಡುಗಳು ಇವೆ. ಕರು ಹಸುವಿಗೆ ಹೆದರುತ್ತದೆಯೇನು? ಇಲ್ಲ, ಅದು ಹೆದರದೆ ತಾಯಿಯನ್ನು ನೋಡುತ್ತಿದೆ. ಅದೂ ಇದನ್ನು ಪ್ರೀತಿಯಿಂದ ನೋಡುತ್ತಿದೆ. ನೋಡು. ಕರು ಬಾಲವನ್ನು ಅಲ್ಲಾಡಿಸುತ್ತಿದೆ. ಗೋಪಾಲನು ಹುಲ್ಲುಗಾವಲಿನಲ್ಲಿ ಹಸುವನ್ನು ಮೇಯಿಸುತ್ತಾನೆ. ಸಾಯಂಕಾಲದಲ್ಲಿ ಅದನ್ನು ಊರಿಗೆ ತರುತ್ತಾನೆ. ಮತ್ತೂ ಹಸು ಹೆಚ್ಚು ಹಾಲನ್ನು ಕೊಡುವುದು.

---

1. ಇದು ಪಂಚಮಿ. ಯಾವುದಕ್ಕೆ ಹೆದರುತ್ತಾರೋ ಅದನ್ನು ಹೇಳುವ ಮಾತಿಗೆ ಪಂಚಮಿ ಬರುವುದು.

ಅಷ್ಟಾವಿಂಶಃ ಪಾಠಃ

ಇದಾನೀಂ ಸಾಯಂಕಾಲಃ । ಬಾಲಕಾಃ ಪಾಠಶಾಲಾಯಾ ನಿರ್ಗಚ್ಛನ್ತಿ। ಪಕ್ಷಿಣೋ ನೀಡಂ ಗಚ್ಛನ್ತಿ। ಗಾವಶ್ಚ ಗ್ರಾಮಮಾಗಚ್ಛನ್ತಿ। ಜನಾ ಇದಾನೀಮುದ್ಯಮಾದ್ವಿ-ರಮನ್ತಿ।[1] ಸರ್ವೇಽಪಿ ಗೃಹಂ ಪ್ರತಿ ನಿವರ್ತನ್ತೇ। ತತ್ರ ತತ್ರ ವಿತರ್ದಿಷೂಪವಿಶನ್ತಿ, ಸುಖೇನ ಸಲ್ಲಪನ್ತಿ ಚ । ತಮಃ ಸರ್ವತ್ರ ಪ್ರಸರತಿ । ರಾತ್ರಿರಾಯಾತಿ। ಆಕಾಶೇ ನಕ್ಷತ್ರಾಣಿ ವಿರಾಜನ್ತೇ। ಗೃಹೇಷು ದೀಪಾಃ ಪ್ರಜ್ವಲನ್ತಿ। ಇದಾನೀಂ ಚನ್ದ್ರ ಉದೇತಿ। ಅಙ್ಗಣೇಷು ಕೌಮುದೀ ಮೂರ್ಛತಿ। ಅಚಿರೇಣ ಸರ್ವೇ ನಿದ್ರಾಂ ಭಜನ್ತೇ॥

ಇಪ್ಪತ್ತೆಂಟನೆಯ ಪಾಠ

ಈಗ ಸಾಯಂಕಾಲವು. ಹುಡುಗರು ಪಾಠಶಾಲೆಯಿಂದ ಹೊರಟು ಬರುತ್ತಾರೆ. ಹಕ್ಕಿಗಳು ಗೂಡಿಗೆ ಹೋಗುತ್ತವೆ. ಮತ್ತು ದನಗಳು ಊರಿಗೆ ಬರುತ್ತವೆ. ಜನರು ಈಗ ಕೆಲಸವನ್ನು ಬಿಡುತ್ತಾರೆ. ಎಲ್ಲರೂ ಮನೆಗೆ ಹಿಂತಿರುಗುತ್ತಾರೆ. ಅಲ್ಲಲ್ಲಿ ಜಗಲಿಗಳಲ್ಲಿ ಕೂತು-ಕೊಳ್ಳುತ್ತಾರೆ, ಮತ್ತು ಸುಖವಾಗಿ ಮಾತಾಡುತ್ತಿರುತ್ತಾರೆ. ಕತ್ತಲೆ ಎಲ್ಲಾ ಕಡೆಯಲ್ಲಿಯೂ ಹಬ್ಬುತ್ತದೆ. ರಾತ್ರಿಯು ಬರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಹೊಳೆಯುತ್ತವೆ. ಮನೆಗಳಲ್ಲಿ ದೀಪಗಳು ಉರಿಯುತ್ತವೆ. ಈಗ ಚಂದ್ರನು ಹುಟ್ಟುತ್ತಾನೆ. ಅಂಗಳದಲ್ಲಿ ಬೆಳ-ದಿಂಗಳು ವ್ಯಾಪಿಸುತ್ತದೆ. ಬೇಗನೆ ಎಲ್ಲರೂ ನಿದ್ರೆಯನ್ನು ಹೊಂದುತ್ತಾರೆ.

---

1. ಉದ್ಯಮಾತ್ - ಯಾವ ಕೆಲಸವನ್ನು ಬಿಡುತ್ತೇವೋ ಅದನ್ನು ಪಂಚಮಿಯಲ್ಲಿಡಬೇಕು.

ಏಕೋನತ್ರಿಂಶಃ ಪಾಠಃ

ಅಯಿ ಬಾಲಾಃ ಪ್ರತಿದಿನಂ ಪ್ರತ್ಯೂಷೇ ಶಯನಾದುತ್ತಿ[1] ಷ್ಠತ। ಮಾತರಂ ಪಿತರಂ ಚ ನಮಸ್ಕುರುತ। ಪ್ರಾತಃಸ್ತೋತ್ರಾಣಿ ಪಠತ। ದನ್ತಾನ್ ವಿಶೋಧಯತ । ಮುಖಂ ಪಾಣೀ ಪಾದೌ ಚ ಪ್ರಕ್ಷಾಲಯತ। ಶೀತೇನ ಜಲೇನ ಕವೋಷ್ಣೇನ ಜಲೇನ ವಾ ಸ್ನಾತ। ಅನನ್ತರಂ ಧೌತವಸ್ತ್ರಾಣಿ ಧಾರಯತ। ಪಾಠಶಾಲಾಂ ಗಚ್ಛತ। ಗುರುಭಿರುಪದಿಷ್ಟಾನ್ ಪಾಠಾನ್ ಸಮ್ಯಗಭ್ಯಸ್ಯತ। ಸಾಯಂ ಚ ಪುನರ್ಮಾತಾಪಿತರೌ ನಮಸ್ಕುರುತ। ಲೋಕೇ ಮಾತ್ರಾ[2] ಸಮೋ ಬನ್ಧುರ್ನಾಸ್ತಿ। ಮಾತಾಪಿತ್ರೋಃ[2] ಸಮೋ ಬನ್ಧುಃ ಕೋಽಸ್ತಿ? ಮಾತೃಭ್ಯೋ ನಮಃ, ಪಿತೃಭ್ಯೋ ನಮಃ, ಆಚಾರ್ಯೇಭ್ಯೋ ನಮಃ॥

ಇಪ್ಪತ್ತೊಂಬತ್ತನೆಯ ಪಾಠ

ಎಲೈ ಹುಡುಗರೇ, ಪ್ರತಿದಿನವೂ ಬೆಳಗ್ಗೆ ಹಾಸಿಗೆಯಿಂದ ಏಳಿರಿ. ತಾಯಿಯನ್ನೂ ತಂದೆಯನ್ನೂ ನಮಸ್ಕರಿಸಿರಿ. ಬೆಳಗಿನ ಸ್ತೋತ್ರಗಳನ್ನು ಹೇಳಿ. ಹಲ್ಲುಗಳನ್ನು ಉಜ್ಜಿಕೊಳ್ಳಿ. ಮುಖವನ್ನೂ ಕೈಕಾಲುಗಳನ್ನೂ ತೊಳೆದುಕೊಳ್ಳಿ. ತಣ್ಣೀರಿನಲ್ಲಿ ಅಥವಾ ಉಗುರು ಬೆಚ್ಚಗಿರುವ ನೀರಿನಲ್ಲಿ ಸ್ನಾನಮಾಡಿರಿ. ಆಮೇಲೆ ಒಗೆದ ಬಟ್ಟೆಗಳನ್ನು ಹಾಕಿಕೊಳ್ಳಿ. ಪಾಠಶಾಲೆಗೆ ಹೋಗಿರಿ. ಗುರುಗಳಿಂದ ಉಪದೇಶವಾದ ಪಾಠಗಳನ್ನು ಚೆನ್ನಾಗಿ ಅಭ್ಯಾಸಮಾಡಿರಿ. ಮತ್ತು ಸಾಯಂಕಾಲದಲ್ಲಿ ಮತ್ತೆ ತಾಯಿ ತಂದೆಗಳನ್ನು ನಮಸ್ಕರಿಸಿರಿ. ಲೋಕದಲ್ಲಿ ತಾಯಿಗೆ ಸಮವಾದ ಬಂಧು ಇಲ್ಲ. ತಾಯಿತಂದೆಗಳಿಗೆ ಸಮನಾದ ಬಂಧು ಯಾರು ಇದಾರೆ? ತಾಯಿಯವರಿಗೆ ನಮಸ್ಕಾರ, ತಂದೆಯವರಿಗೆ ನಮಸ್ಕಾರ, ಗುರುಗಳಿಗೆ ನಮಸ್ಕಾರ.

---

1. ಶಯನಾತ್ + ಉತ್ತಿಷ್ಠತ.
2. ಯಾರಿಗೆ ಹೋಲಿಸುತ್ತೇವೋ ಅದನ್ನು ಹೇಳುವ ಮಾತು ತೃತೀಯದಲ್ಲಿರುವದು, ಷಷ್ಠಿಯಲ್ಲಿಯೂ ಇರುವದುಂಟು.

ತ್ರಿಂಶಃ ಪಾಠಃ

ತ್ವಮೇವ ಮಾತಾ ಚ ಪಿತಾ ತ್ವಮೇವ ।
ತ್ವಮೇವ ಬನ್ಧುಶ್ಚ ಗುರುಸ್ತ್ವಮೇವ ॥
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ ।
ತ್ವಮೇವ ಸರ್ವಂ ಮಮ ದೇವದೇವ ॥೧॥
ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವಃ ಕಾಮಾನವಾಪ್ನೋತು ಸರ್ವಃ ಸರ್ವತ್ರ ನನ್ದತು ॥೨॥

ಮೂವತ್ತನೆಯ ಪಾಠ

ದೇವದೇವನೆ, ನೀನೇ ತಾಯಿಯು ಮತ್ತು ನೀನೇ ತಂದೆಯು, ನೀನೇ ಬಂಧು, ಮತ್ತು ನೀನೇ ಗುರು; ನೀನೇ ವಿದ್ಯೆಯು, ನೀನೇ ದ್ರವ್ಯವು, ನನಗೆ ಎಲ್ಲವೂ ನೀನೆ. ॥೧॥

ಪ್ರತಿಯೊಬ್ಬನೂ ಕಷ್ಟಗಳನ್ನು ದಾಟಲಿ. ಪ್ರತಿಯೊಬ್ಬನೂ ಸುಖಗಳನ್ನು ಕಾಣಲಿ. ಪ್ರತಿಯೊಬ್ಬನೂ ಇಷ್ಟಾರ್ಥಗಳನ್ನು ಹೊಂದಲಿ. ಪ್ರತಿಯೊಬ್ಬನೂ ಎಲ್ಲಾ ಕಡೆಯಲ್ಲಿಯೂ ಸಂತೋಷಪಡಲಿ. ॥೨॥

ಅಭ್ಯಾಸಗಳು

ಈ ಅಭ್ಯಾಸಗಳಲ್ಲಿ ಕೊಟ್ಟಿರುವ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿ. ವಿಶೇಷ್ಯದ ಲಿಂಗವಿಭಕ್ತಿವಚನಗಳೇ ವಿಶೇಷಣಕ್ಕೂ ಇರಬೇಕೆಂಬುದನ್ನು ಲಕ್ಷ್ಯದಲ್ಲಿಡಬೇಕು.

೧

ಈ ಹುಡುಗನು ಏನು ಮಾಡುತ್ತಾನೆ? ಅವನು ಪುಸ್ತಕವನ್ನು ಓದುತ್ತಾನೆ. ನೀವು ಈಗ ಏನು ಮಾಡುತ್ತಿದ್ದೀರಿ? ನಾವು ಸ್ಲೇಟಿ-

ನಲ್ಲಿ ಬರೆಯುತ್ತಿದ್ದೇವೆ. ಹುಡುಗರೆಲ್ಲರೂ ಏನು ಮಾಡುತ್ತಾರೆ? ಅವರೆಲ್ಲರೂ ಆಡುತ್ತಿದ್ದಾರೆ.

೨

ಇಲ್ಲಿ ಕೆಲವರು ಹುಡುಗರು ಕೂತಿದ್ದಾರೆ. ಇವರಲ್ಲಿ ರಾಮನು ಯಾರು? ಅವನು ರಾಮನು, ಇವನು ಲಕ್ಷ್ಮಣನು. ನಿಮ್ಮ ಅಣ್ಣನು ಯಾರು? ಇಲ್ಲಿ ನಮ್ಮ ಅಣ್ಣನು ಇಲ್ಲ. ಅವನು ನನ್ನ ಸ್ನೇಹಿತನು. ಈ ಹುಡುಗಿ ಯಾರು? ಈಕೆ ಗೌರಿ. ರುಕ್ಮಿಣಿಯೆಲ್ಲಿದ್ದಾಳೆ?

೩

ಇದು ಯಾರ ಕುದುರೆ? ಈ ಪ್ರಾಣಿ ಯಾವದು? ಇದು ಎತ್ತೇನು? ಇವೆಲ್ಲವೂ ನಾಯಿಗಳು. ಇದು ಎಮ್ಮೆಯೋ ಕೋಣವೋ? ಇದು ಎಮ್ಮೆ, ಅದು ಕೋಣ. ಹಸು ಏನು ಮಾಡುತ್ತದೆ? ಕರುವನ್ನು ಯಾವನು ಹಿಡಿದುಕೊಂಡಿದ್ದಾನೆ? ಈ ಹಸು ಹಾಲನ್ನು ಕೊಡುತ್ತದೆಯೇನು? ಈಕೆ ಯಾರು? ಅವಳು ಹಸುವನ್ನು ಹಾಲು ಕರೆಯುತ್ತಾಳೆ.

೪

ರಾಮನೆ, ನೀನು ಏನು ಮಾಡುತ್ತೀಯೆ? ಇಲ್ಲಿ ಬಾ, ಕೂತುಕೊ. ಕೃಷ್ಣನು ಎಲ್ಲಿ? ಅವನು ಮನೆಯಲ್ಲಿ ಬರೆಯುತ್ತಿದ್ದಾನೆ. ನಿನ್ನ ಅಂಗಿ ಎಲ್ಲಿ? ಇವನು ನಿನ್ನ ಸ್ನೇಹಿತನೇನು? ಹೌದು. ಅವನೂ ನನ್ನ ಸ್ನೇಹಿತನೆ. ನಿನ್ನ ತಾಯಿ ಯಾರು? ನಿನ್ನ ತಂದೆ ಯಾರು? ನಿನ್ನ ತಂಗಿ ಏನು ಮಾಡುತ್ತಿದ್ದಾಳೆ? ನಾನು ಈಗ ಆಡುತ್ತಿದ್ದೇನೆ. ಅಂಗಿಯು ಮನೆಯಲ್ಲಿದೆ. ನಮ್ಮ ತಾಯಿ ಇಲ್ಲ.

೫

ಇದು ಯಾರ ಹಣ್ಣು? ಹಾಲನ್ನು ತರಲೇನು? ಅಯ್ಯ, ನೀನು ಕಾಫಿಯನ್ನು ಕುಡಿಯುವದಿಲ್ಲವೆ? ಇವನು ಯಾರು? ಎಲ್ಲರೂ ಕ್ಷೇಮವೋ? ಈವರೆಗೆ ನಾವೆಲ್ಲರೂ ಕ್ಷೇಮ. ನಿಮಗೆಲ್ಲ ಕ್ಷೇಮವೆ?

ಇತ್ತ ಬರೋಣವಾಗಲಿ. ಇಲ್ಲಿ ಕೂತುಕೊಳ್ಳೋಣಾಗಬೇಕು. ನೀವು ಆಯಾಸಪಟ್ಟಿದ್ದೀರಿ. ತಮಗೆ ಏನು ಕೊಡಲಿ?

೬

ಈ ಬಟ್ಟೆ ಹಗುರವಾಗಿದೆ. ಇದು ಬಾಳಿಕೆ ಬರುವದಲ್ಲ. ಹತ್ತಿಯ ಬಟ್ಟೆ ನಮಗೆ ಹಿತವಾಗಿರುವದು. ಉಣ್ಣೆಯ ಬಟ್ಟೆಗೆ ಬಹಳ ಬೆಲೆಯಾಗುತ್ತದೆ. ಈ ಬಟ್ಟೆಯ ಉದ್ದ ಆರು ಮೊಳ. ನಿನಗೆ ಸ್ನಾನದ ಪಂಚೆ ಬೇಕೇನು? ನೀವು ಈಗ ಸ್ನಾನಮಾಡಿರಿ.

೭

ದಶರಥನು ರಾಮನ ತಂದೆ. ದೇವಕಿಯು ಕೃಷ್ಣನ ತಾಯಿ. ದುರ್ಯೋಧನನು ದುಶ್ಶ್ಯಾಸನನ ಸಹೋದರನು. ಸುಭದ್ರೆಯು ಕೃಷ್ಣನ ಸಹೋದರಿ. ನಿಮ್ಮಪ್ಪನು ಯಾರು? ನಿಮ್ಮ ಮನೆ ಎಲ್ಲಿ ಇದೆ? ಅಲ್ಲಿ ನೀವು ಏನು ಮಾಡುತ್ತೀರಿ? ಅಲ್ಲಿ ಗಾಳಿ ಇದೆಯೇನು? ನಿಮ್ಮ ಮನೆಯಲ್ಲಿ ಎಷ್ಟು ಹಸುಗಳು ಇವೆ? ನಮ್ಮ ಮನೆ ಇಲ್ಲಿಯೇ ಇದೆ. ಅದರಲ್ಲಿ ಮೂರು ಹಸುಗಳು ಇವೆ.

೮

ಲಕ್ಷ್ಮಣನು ಒಳಗೆ ಇದ್ದಾನೆಯೇ? ಅವನು ಮನೆಯಲ್ಲಿಲ್ಲ. ಒಳಗೆ ಯಾವನು ಇದ್ದಾನೆ? ಒಬ್ಬ ವಿದ್ಯಾರ್ಥಿ ಇದ್ದಾನೆ. ಅವನನ್ನು ಕೂಗು. ಸ್ನೇಹಿತನೆ, ಬಾಗಿಲು ತೆಗೆ. ಒಳಗೆ ಬಾ. ನೀನು ಬಹಳ ಹಸಿದಿದ್ದೀಯೆ. ಇಲ್ಲಿ ತಿಂಡಿ ಏನು ಇದೆ? ನಿನಗೆ ಚಕ್ಕುಲಿ ಸೇರುತ್ತದೆಯೆ? ಹಾಲನ್ನು ಕುಡಿಯುತ್ತೀಯೇನು? ನನಗೆ ಬಾಯಾರಿಕೆಯಾಗಿದೆ. ನೀರು ಕೊಡು. ಇಲ್ಲಿ ಕೆಲವು ಹಣ್ಣುಗಳು ಇವೆ. ಮೊದಲು ಈ ಹಣ್ಣನ್ನು ತಿನ್ನು.

೯

ನಿನಗೆ ಏನು ಬೇಕು? ನನಗೆ ಏನೂ ಬೇಡ. ನನಗೆ ಒಂದು ಪುಸ್ತಕವನ್ನು ಕೊಡು. ಮೂರನೆಯ ಪಾಠವನ್ನು ಓದು. ಗೋವಿಂದನಿಗೆ

ಹಾಲು ಸೇರುವದಿಲ್ಲವೆ? ನಿಮಗೆ ಪುಸ್ತಕವನ್ನು ಕೊಡಲೊ, ಲೇಖಿನಿಯನ್ನು ಕೊಡಲೊ? ಈಗ ಒಂದು ಸೀಸದಕಡ್ಡಿಯನ್ನು ಕೊಡು, ಆ ಮೇಲೆ ಪುಸ್ತಕವನ್ನು ತಾ. ನನಗೆ ಏನಾದರೂ ಕೊಡು. ಕೃಷ್ಣನಿಗೆ ಏನು ಕೊಡಲಿ? ರಾಮನನ್ನೂ ಕರೆ. ಎಲ್ಲರೂ ಬನ್ನಿರಿ. ನಿಮಗೆ ಒಬ್ಬೊಬ್ಬರಿಗೆ ಮೂರು ಮೂರು ಬಳಪಗಳನ್ನು ಕೊಡುತ್ತೇನೆ.

೧೦

ಈ ಅಂಗಳದಲ್ಲಿ ಎಷ್ಟು ಎಮ್ಮೆಗಳಿವೆ? ನಾಲ್ಕು ಎಮ್ಮೆಗಳೂ, ಮೂರು ಕೋಣಗಳೂ ಇವೆ. ನಿಮ್ಮ ಕುದುರೆ ಬಿಳಿಯದೇನು? ಅಲ್ಲ, ಅದು ಕರಿಯದು. ಇದು ಹಸು. ಇದರ ಕರುವೆಲ್ಲಿ? ಇದು ಟಗರೋ ಆಡೊ? ಅಲ್ಲಿ ಕತ್ತೆಗಳು ಅರಚುತ್ತಿವೆ. ಇಲ್ಲಿ ನಾಯಿಗಳು ಬಗುಳುತ್ತಿವೆ. ಈಗ ಕೋಳಿ ಕೂಗುತ್ತಿದೆಯೇನು? ಇಲ್ಲ, ಈಗ ಸಾಯಂಕಾಲ. ಇಲ್ಲಿಯವರೆಗೆ ಎಷ್ಟು ಪಾಠಗಳು ಆದವು? ನಿನ್ನೆ ಯಾವ ವಾರ? ಈಗ ಯಾವ ತಿಂಗಳು? ದೇವರಿಗೆ ನಮಸ್ಕಾರ.

ನಾಮಪದದ ವಿಭಕ್ತಿಮಾಲೆ
ಏಕವಚನ

ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ
ವೃಕ್ಷಃ - ಮರವು	ಶಾಖಾ - ಕೊಂಬೆ	ಫಲಮ್ - ಹಣ್ಣು
ವೃಕ್ಷ - ಮರವೆ	ಶಾಖೇ - ಕೊಂಬೆಯೆ	ಫಲ - ಹಣ್ಣೆ
ವೃಕ್ಷಮ್ - ಮರವನ್ನು	ಶಾಖಾಮ್ - ಕೊಂಬೆಯನ್ನು	ಫಲಮ್ - ಹಣ್ಣನ್ನು
ವೃಕ್ಷೇಣ - ಮರದಿಂದ	ಶಾಖಯಾ - ಕೊಂಬೆಯಿಂದ	ಫಲೇನ - ಹಣ್ಣಿನಿಂದ
ವೃಕ್ಷಾಯ - ಮರಕ್ಕೆ	ಶಾಖಾಯೈ - ಕೊಂಬೆಗೆ	ಫಲಾಯ - ಹಣ್ಣಿಗೆ
ವೃಕ್ಷಾತ್ - ಮರದ ದೆಸೆಯಿಂದ	ಶಾಖಾಯಾಃ - ಕೊಂಬೆಯ ದೆಸೆಯಿಂದ	ಫಲಾತ್ - ಹಣ್ಣಿನ ದೆಸೆಯಿಂದ
ವೃಕ್ಷಸ್ಯ - ಮರದ	ಶಾಖಾಯಾಃ - ಕೊಂಬೆಯ	ಫಲಸ್ಯ - ಹಣ್ಣಿನ
ವೃಕ್ಷೇ - ಮರದಲ್ಲಿ	ಶಾಖಾಯಾಮ್ - ಕೊಂಬೆಯಲ್ಲಿ	ಫಲೇ - ಹಣ್ಣಿನಲ್ಲಿ

ಗುರುಃ - ಗುರುವು	ಮಹಿಷೀ - ಎಮ್ಮೆ	ವಸ್ತು - ವಸ್ತುವು
ಗುರೋ - ಗುರುವೆ	ಮಹಷಿ - ಎಮ್ಮೆಯೆ	ವಸ್ತೋ / ವಸ್ತು - ವಸ್ತುವೆ
ಗುರುಮ್ - ಗುರುವನ್ನು	ಮಹಿಷೀಮ್ - ಎಮ್ಮೆಯನ್ನು	ವಸ್ತು - ವಸ್ತುವನ್ನು
ಗುರುಣಾ - ಗುರುವಿನಿಂದ	ಮಹಿಷ್ಯಾ - ಎಮ್ಮೆಯಿಂದ	ವಸ್ತುನಾ - ವಸ್ತುವಿನಿಂದ
ಗುರುವೇ - ಗುರುವಿಗೆ	ಮಹಿಷ್ಯೈ - ಎಮ್ಮೆಗೆ	ವಸ್ತುನೇ - ವಸ್ತುವಿಗೆ
ಗುರೋಃ - ಗುರುವಿನ ದೆಸೆಯಿಂದ	ಮಹಿಷ್ಯಾಃ - ಎಮ್ಮೆಯ ದೆಸೆಯಿಂದ	ವಸ್ತುನಃ - ಮಸ್ತುವಿನ ದೆಯಿಂದ
ಗುರೋಃ - ಗುರುವಿನ	ಮಹಿಷ್ಯಾಃ - ಎಮ್ಮೆಯ	ವಸ್ತುನಃ - ವಸ್ತುವಿನ
ಗುರೌ - ಗುರುವಿನಲ್ಲಿ	ಮಹಿಷ್ಯಾಮ್ - ಎಮ್ಮೆಯಲ್ಲಿ	ವಸ್ತುನಿ - ವಸ್ತುವಿನಲ್ಲಿ

ಉಪಾಧ್ಯಾಯರಿಗೆ:- ಬೇರೆ ಬೇರೆ ಶಬ್ದಗಳ ವಿಭಕ್ತಿ ಮಾಲೆಯನ್ನು ಬಾಲಕರಿಂದ ಏರ್ಪಡಿಸಬೇಕು. ಒಂದೊಂದು ವಿಭಕ್ತಿ ರೂಪವನ್ನು ಕೊಟ್ಟು ಅರ್ಥ ಹೇಳಿಸಬೇಕು. ಬಹುವಚನಕ್ಕೂ ಹೀಗೆಯೇ ಮಾಡಿಸಬೇಕು.

ವಿಶೇಷ:- 1. ಗಂಡಸರ ಮತ್ತು ಗಂಡುಪ್ರಾಣಿಗಳ ಹೆಸರು ಸಾಮಾನ್ಯವಾಗಿ ಪುಲ್ಲಿಂಗ; ಹೆಂಗಸರ ಮತ್ತು ಹೆಣ್ಣು ಪ್ರಾಣಿಗಳ ಹೆಸರು ಸ್ತ್ರೀಲಿಂಗ; ನಿರ್ಜೀವವಸ್ತುಗಳ ಹೆಸರು ಸಂದರ್ಭಾನುಸಾರ ಮೂರು-ಲಿಂಗಗಳಲ್ಲಿಯೂ ಇರುವದು.

2. ಅಕಾರಾಂತವಾಗಿ ಪುಲ್ಲಿಂಗವಾದರೆ ವೃಕ್ಷಶಬ್ದದಂತೆ, ನಪುಂಸಕ-ವಾದರೆ ಫಲಶಬ್ದದಂತೆ ವಿಭಕ್ತಿ ರೂಪಗಳು ಆಗುತ್ತವೆ. ಉಕಾರಾಂತ ಪುಲ್ಲಿಂಗವಾದರೆ ಗುರುಶಬ್ದದಂತೆ, ನಪುಂಸಕವಾದರೆ ವಸ್ತು ಶಬ್ದದಂತೆ ರೂಪಗಳು ಆಗುತ್ತವೆ.

3. ಆಕಾರಾಂತಶಬ್ದಗಳೂ ಈಕಾರಾಂತಶಬ್ದಗಳೂ ಬಹುಮಟ್ಟಿಗೆ ಸ್ತ್ರೀಲಿಂಗವಾಗಿರುವವು. ಇವುಗಳ ರೂಪಗಳನ್ನು ಶಾಖಾ, ಮಹಿಷೀ ಶಬ್ದಗಳ ರೂಪದಂತೆ ತಿಳಿಯಬೇಕು.

4. ವಿಶೇಷಣಗಳು ವಿಶೇಷ್ಯದ ಲಿಂಗವಾಗುವವು. ಆದ್ದರಿಂದ ಇವಕ್ಕೆ ಮೂರು ರೂಪವುಂಟು. ಉದಾ:- ಸ್ಥೂಲಃ, ಸ್ಥೂಲಾ, ಸ್ಥೂಲಂ - ಇವು-ಗಳನ್ನು ಕ್ರಮವಾಗಿ ವೃಕ್ಷಃ, ಶಾಖಾ, ಫಲಂ - ಈ ಶಬ್ದಗಳಂತೆ ನಡೆಸ-ಬೇಕು. ಋಜುಃ, ಋಜ್ವೀ, ಋಜು - ಈ ವಿಶೇಷಣಗಳನ್ನು ಕ್ರಮವಾಗಿ ಗುರುಃ, ಮಹಿಷೀ, ವಸ್ತು ಈ ಶಬ್ದಗಳಂತೆ ನಡೆಸಬೇಕು.

ನಾಮಪದದ ವಿಭಕ್ತಿಮಾಲೆ
ಬಹುವಚನ

ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ
ವೃಕ್ಷಾಃ - ಮರಗಳು	ಶಾಖಾಃ - ಕೊಂಬೆಗಳು	ಫಲಾನಿ - ಹಣ್ಣುಗಳು
ವೃಕ್ಷಾಃ - ಮರಗಳೆ	ಶಾಖಾಃ - ಕೊಂಬೆಗಳೆ	ಫಲಾನಿ - ಹಣ್ಣುಗಳೆ
ವೃಕ್ಷಾನ್- ಮರಗಳನ್ನು	ಶಾಖಾಃ - ಕೊಂಬೆಗಳನ್ನು	ಫಲಾನಿ - ಹಣ್ಣುಗಳನ್ನು
ವೃಕ್ಷೈಃ - ಮರಗಳಿಂದ	ಶಾಖಾಭಿಃ - ಕೊಂಬೆಗಳಿಂದ	ಫಲೈಃ - ಹಣ್ಣುಗಳಿಂದ
ವೃಕ್ಷೇಭ್ಯಃ - ಮರಗಳಿಗೆ	ಶಾಖಾಭ್ಯಃ - ಕೊಂಬೆಗಳಿಗೆ	ಫಲೇಭ್ಯಃ - ಹಣ್ಣುಗಳಿಗೆ
ವೃಕ್ಷೇಭ್ಯಃ - ಮರಗಳ ದೆಸೆಯಿಂದ	ಶಾಖಾಭ್ಯಃ - ಕೊಂಬೆಗಳ ದೆಸೆಯಿಂದ	ಫಲೇಭ್ಯಃ - ಹಣ್ಣುಗಳ ದೆಸೆಯಿಂದ
ವೃಕ್ಷಾಣಾಮ್ - ಮರಗಳ	ಶಾಖಾನಾಮ್ - ಕೊಂಬೆಗಳ	ಫಲಾನಾಮ್ - ಹಣ್ಣುಗಳ
ವೃಕ್ಷೇಷು - ಮರಗಳಲ್ಲಿ	ಶಾಖಾಸು - ಕೊಂಬೆಗಳಲ್ಲಿ	ಫಲೇಷು - ಹಣ್ಣುಗಳಲ್ಲಿ

ಗುರವಃ - ಗುರುಗಳು	ಮಹಿಷ್ಯಃ - ಎಮ್ಮೆಗಳು	ವಸ್ತೂನಿ - ವಸ್ತುಗಳು
ಗುರವಃ - ಗುರುಗಳೆ	ಮಹಿಷ್ಯಃ - ಎಮ್ಮೆಗಳೆ	ವಸ್ತೂನಿ - ವಸ್ತುಗಳೆ
ಗುರೂನ್ - ಗುರುಗಳನ್ನು	ಮಹಿಷೀಃ - ಎಮ್ಮೆಗಳನ್ನು	ವಸ್ತೂನಿ - ವಸ್ತುಗಳನ್ನು
ಗುರುಭಿಃ - ಗುರುಗಳಿಂದ	ಮಹಿಷೀಭಿಃ - ಎಮ್ಮೆಗಳಿಂದ	ವಸ್ತುಭಿಃ - ವಸ್ತುಗಳಿಂದ
ಗುರುಭ್ಯಃ - ಗುರುಗಳಿಗೆ	ಮಹಿಷೀಭ್ಯಃ - ಎಮ್ಮೆಗಳಿಗೆ	ವಸ್ತುಭ್ಯಃ - ವಸ್ತುಗಳಿಗೆ
ಗುರುಭ್ಯಃ - ಗುರುಗಳ ದೆಸೆಯಿಂದ	ಮಹಿಷೀಭ್ಯಃ - ಎಮ್ಮೆಗಳ ದೆಸೆಯಿಂದ	ವಸ್ತುಭ್ಯಃ - ವಸ್ತುಗಳ ದೆಸೆಯಿಂದ
ಗುರೂಣಾಮ್ - ಗುರುಗಳ	ಮಹಿಷೀಣಾಮ್ -ಎಮ್ಮೆಗಳ	ವಸ್ತೂನಾಮ್ - ವಸ್ತುಗಳ
ಗುರುಷು - ಗುರುಗಳಲ್ಲಿ	ಮಹಿಷೀಸು - ಎಮ್ಮೆಗಳಲ್ಲಿ	ವಸ್ತುಷು - ವಸ್ತುಗಳಲ್ಲಿ

ವಿಶೇಷ :- 1. ಹಿಂದೆ ಏಕವಚನಕ್ಕೆ ಹೇಳಿದಂತೆ ಇಲ್ಲಿ ಲಿಂಗ-ವಿಭಕ್ತಿಗಳ ನಿಯಮವನ್ನು ಅರಿಯಬೇಕು.

2. ಷಷ್ಠೀವಿಭಕ್ತಿಗೆ ಅನೇಕವೇಳೆ ಕನ್ನಡದ ಚತುರ್ಥಿಯಿಂದ

ಉಪಾಧ್ಯಾಯರಿಗೆ:- ದ್ವಿವಚನವು ಪ್ರಯೋಗದಲ್ಲಿ ಕಡಿಮೆಯಾದ್ದರಿಂದ ಬಿಟ್ಟಿದೆ. ಈ ಪಾಠಾವಳಿಯ ಮುಂದಿನ ಪುಸ್ತಕದಲ್ಲಿ ಇದನ್ನು ಕುರಿತು ಬರೆಯಲಾಗಿದೆ.

ಅರ್ಥಮಾಡಬೇಕಾಗುತ್ತದೆ. ಉದಾ: ರಾಮಸ್ಯ ಭಗಿನೀ ಅಸ್ತಿ ಕಿಮ್? = ರಾಮನಿಗೆ ತಂಗಿ ಇದ್ದಾಳೇನು? ವೃಕ್ಷಸ್ಯ ಕತಿ ಶಾಖಾಃ ಸನ್ತಿ? = ಮರಕ್ಕೆ ಎಷ್ಟು ಕೊಂಬೆಗಳಿವೆ? ಅಸ್ಯ ವಸ್ತುನಃ ಮೂಲ್ಯಂ ನಾಸ್ತಿ - ಈ ವಸ್ತುವಿಗೆ ಬೆಲೆ ಇಲ್ಲ.

3. ವಿಶೇಷಣಗಳಿಗೆ ವಿಶೇಷ್ಯಕ್ಕೆ ಅನುಸಾರವಾದ ವಚನಗಳು ಬರುತ್ತವೆ. ಸ್ಥೂಲಃ ಪಟಃ - ದಪ್ಪವಾದ ಬಟ್ಟೆ, ಸ್ಥೂಲಾಃ ಪಟಾಃ - ದಪ್ಪವಾದ ಬಟ್ಟೆಗಳು. ಹರಿತಂ ಪರ್ಣಂ - ಹಸುರಾದ ಎಲೆ, ಹರಿತಾನಿ ಪರ್ಣಾನಿ - ಹಸುರಾದ ಎಲೆಗಳು, ವೃದ್ಧಾ ಮಹಿಷೀ - ಮುದಿ ಎಮ್ಮೆ, ವೃದ್ಧಾಃ ಮಹಿಷ್ಯಃ - ಮುದಿ ಎಮ್ಮೆಗಳು.

ಕ್ರಿಯಾಪದದ ಕೆಲವು ರೂಪಗಳು

ಪಠತಿ - ಓದುತ್ತಾನೆ	ಪಠ - ಓದು
ಪಠತಃ - (ಇಬ್ಬರು) ಓದುತ್ತಾರೆ	ಪಠತ - ಓದಿರಿ
ಪಠನ್ತಿ - ಓದುತ್ತಾರೆ	ಪಠತು - (ಅವನು) ಓದಲಿ
ಪಠಸಿ - ಓದುತ್ತೀಯೆ	ವರ್ತತೇ - ಇರುತ್ತಾನೆ
ಪಠಥಃ - (ಇಬ್ಬರು) ಓದುತ್ತೀರಿ	ವರ್ತಸೇ - ಇರುತ್ತಿಯೆ
ಪಠಥ - ಓದುತ್ತೀರಿ	ವರ್ತೇತೇ - (ಇಬ್ಬರು) ಇರುತ್ತಾರೆ
ಪಠಾಮಿ - ಓದುತ್ತೇನೆ	ವರ್ತೇ - ಇರುತ್ತೇನೆ
ಪಠಾವಃ - (ಇಬ್ಬರು) ಓದುತ್ತೇವೆ	ವರ್ತನ್ತೇ - ಇರುತ್ತಾರೆ
ಪಠಾಮಃ - ಓದುತ್ತೇವೆ	ವರ್ತಾಮಹೇ - ಇರುತ್ತೇವೆ

ಸೂಚನೆ:- 1. ಕೆಲವು 'ಪಠತಿ' ಎಂಬ ಕ್ರಿಯಾಪದದಂತೆಯೂ ಇನ್ನು ಕೆಲವು ವರ್ತತೇ ಎಂಬಂತೆಯೂ ರೂಪಗಳನ್ನು ಪಡೆಯುತ್ತವೆ.

ಇವುಗಳನ್ನು ಎರಡು ತರಗತಿಯಾಗಿ ವಿಂಗಡಿಸಿ ಶಬ್ದ ಕೋಶದಲ್ಲಿ ಕೊಟ್ಟಿದೆ.

2. ಪಠತಿ = ಓದುತ್ತಾನೆ, ಓದುತ್ತಾಳೆ, ಓದುತ್ತದೆ - ಹೀಗೆ ಮೂರು ಲಿಂಗದಲ್ಲಿಯೂ ಅರ್ಥಮಾಡಿಕೊಳ್ಳಬಹುದು. ವರ್ತತೇ ಎಂಬುದಕ್ಕೂ ಹೀಗೆಯೆ.

ಶಬ್ದಕೋಶ

ಈ ಪುಸ್ತಕದಲ್ಲಿ ಬಂದಿರುವ ಮುಖ್ಯಶಬ್ದಗಳನ್ನು ಅರ್ಥಾನುಸಾರ ವಿಂಗಡಿಸಿ ಇಲ್ಲಿ ಬರೆದಿರುತ್ತದೆ. ಇವುಗಳನ್ನು ಆಗಾಗ್ಗೆ ಓದಿ ಚಿಂತನೆ ಮಾಡಿಕೊಳ್ಳಬೇಕು. ಸ್ತ್ರೀ = ಸ್ತ್ರೀಲಿಂಗ, ನ = ನಪುಂಸಕಲಿಂಗ.

೧. ಸರ್ವನಾಮಗಳು

ಕತರಃ - (ಇವರಿಬ್ಬರಲ್ಲಿ) ಯಾವನು?	ಇಮಾನಿ - ಇವು
ಕತಮಃ - (ಇವರಲ್ಲಿ) ಯಾವನು?	ಏತೇ - ಇವರು
ಸರ್ವಮ್ - ಎಲ್ಲವೂ	ಏತಾನಿ - ಇವು
ಅಹಮ್ - ನಾನು	ಭವನ್ತಃ - ತಾವು
ತ್ವಮ್ - ನೀನು	ಸರ್ವೇ - ಎಲ್ಲರು
ಸಃ - ಅವನು	ಸರ್ವಾಃ - ಎಲ್ಲರೂ (ಸ್ತ್ರೀ)
ಸಾ - ಅವಳು	ಸರ್ವಾಣಿ - ಎಲ್ಲವು
ತತ್ - ಅದು	ಇತರೇ - ಮಿಕ್ಕವರು

ಅಸೌ - ಅವನು, ಇವನು,	ಕೇಚಿತ್ - ಕೆಲವರು
- ಅವಳು, ಇವಳು.	ಕಾಶ್ಚಿತ್ - ಕೆಲವರು (ಸ್ತ್ರೀ)
ಅಯಮ್ - ಇವನು	ಕಃ - ಯಾವನು?
ಇಯಮ್ - ಇವಳು	ಕಾ - ಯಾವಳು?
ಇದಮ್ - ಇದು	ಕಿಮ್ - ಯಾವುದು, ಏನು?
ಏಷಃ - ಇವನು	ಕೇ - ಯಾರು?
ಏಷಾ - ಇವಳು	ಮಾಮ್ - ನನ್ನನ್ನು
ಏತತ್ - ಇದು	ಮಹ್ಯಮ್ - ನನಗೆ
ಭವಾನ್ - ನೀನು	ಮಮ - ನನ್ನ, ನನಗೆ
ಸರ್ವಃ - ಪ್ರತಿಯೊಬ್ಬನು	ಮೇ - ನನ್ನ, ನನಗೆ
ಅಪರಮ್ - ಇನ್ನೊಂದು	ಅಸ್ಮಭ್ಯಮ್ - ನಮಗೆ
ಅನ್ಯತ್ - ಇನ್ನೊಂದು	ಅಸ್ಮಾಕಮ್ - ನಮ್ಮ, ನಮಗೆ
ಆವಾಮ್ - ನಾವಿಬ್ಬರು	ತುಭ್ಯಮ್ - ನಿನಗೆ
ವಯಮ್ - ನಾವು	ತವ - ನಿನ್ನ, ನಿನಗೆ
ಯುವಾಮ್ - ನೀವಿಬ್ಬರು	ತೇ - ನಿನ್ನ, ನಿನಗೆ
ಯೂಯಮ್ - ನೀವು	ಯುಷ್ಮಭ್ಯಮ್ - ನಿಮಗೆ
ತೌ - ಅವರಿಬ್ಬರು	ಯುಷ್ಮಾಕಮ್ - ನಿಮ್ಮ, ನಿಮಗೆ
ತೇ - ಅವರು	ಭವತಾಮ್ - ತಮ್ಮ, ತಮಗೆ
ತೇ - ಅವರಿಬ್ಬರು (ಸ್ತ್ರೀ)	ಕೇನ - ಏತರಿಂದ?
ತಾಃ - ಅವರು (ಸ್ತ್ರೀ)	ಕಸ್ಮೈ - ಯಾವನಿಗೆ?
ತಾನಿ - ಅವು	ಕಸ್ಯ - ಯಾರ, ಯಾರಿಗೆ?
ಅಮೀ - ಅವರು, ಇವರು	ಅಪರಸ್ಮಿನ್ - ಇನ್ನೊಂದರಲ್ಲಿ
ಇಮೇ - ಇವರು	
ಇಮಾಃ - ಇವರು (ಸ್ತ್ರೀ)	

ವಿಶೇಷ:- 1. ಅಸೌ, ಅಯಮ್, ಏಷಃ; ಅಸೌ, ಇಯಮ್, ಏಷಾ:- ಇವುಗಳನ್ನು ಎದುರಿಗಿರುವ ಪದಾರ್ಥವನ್ನು ತೋರಿಸುವದಕ್ಕೆ ಉಪಯೋಗಿಸುತ್ತಾರೆ; ಆಗ ಅಸೌ ಎಂಬುದು ದೂರವಿರುವುದಕ್ಕೂ ಅಯಮ್ ಎಂಬುದು ಹತ್ತಿರವಿರುವುದಕ್ಕೂ, ಏಷಃ ಎಂಬುದು ತೀರ ಹತ್ತಿರವಿರುವದಕ್ಕೂ ಉಪಯೋಗವಾಗುತ್ತವೆ. ಅಸೌ ಎಂಬುದನ್ನೊಂದನ್ನೇ ಉಪಯೋಗಿಸುವಾಗ ಇವನು, ಇವಳು ಎಂದು ಕನ್ನಡಿಸಬೇಕು.

2. ಮೇಲೆ ಕೊಟ್ಟಿರುವ ಮಾತುಗಳಲ್ಲಿ ಅವನು, (ಇವನು); ಅವಳು, (ಇವಳು) - ಎಂಬರ್ಥದ ಮಾತುಗಳನ್ನು ಮನುಷ್ಯರಿಗೇ ಅಲ್ಲದೆ ಪ್ರಾಣಿಗಳಿಗೂ ಪುಲ್ಲಿಂಗದ ಸ್ತ್ರೀಲಿಂಗದ ನಿರ್ಜೀವ ಪದಾರ್ಥಗಳ ಹೆಸರುಗಳಿಗೂ - ಉಪಯೋಗಿಸಬಹುದು. ಉದಾ: ಅಸೌ ವೃಕ್ಷಃ, ಅಯಂ ದಣ್ಡಃ, ಏಷ ಕಟಃ; ಅಸೌ ಶಾಟೀ, ಇಯಂ ಲೇಖಿನೀ, ಏಷಾ ಪೇಟಿಕಾ; ಅಸೌ ಮಹಿಷಃ, ಇಯಂ ಮಹಿಷೀ, ಏಷಾ ಕುಕ್ಕುಟೀ.

3. ಭವಾನ್ (ಏಕವಚನ), ಭವನ್ತಃ (ಬಹುವಚನ) - ಇವುಗಳನ್ನು ಗೌರವಕ್ಕಾಗಿ ಉಪಯೋಗಿಸುವರು. ಇವುಗಳಿಗೆ ಪ್ರಥಮಪುರುಷದ ಕ್ರಿಯೆ ಬೇಕು.

೨. ಸಂಖ್ಯೆ, ಅಳತೆ ಮುಂತಾದವುಗಳ ಹೆಸರುಗಳು

ಏಕಮ್ - ಒಂದು	ಪ್ರಥಮಃ - ಒಂದನೆಯ	ಏಕವಿಂಶತಿಃ - ಇಪ್ಪತ್ತೊಂದು
ದ್ವೇ - ಎರಡು	ದ್ವಿತೀಯಃ - ಎರಡನೆಯ	ದ್ವಾವಿಂಶತಿಃ - ಇಪ್ಪತ್ತೆರಡು
ತ್ರೀಣಿ - ಮೂರು	ತೃತೀಯಃ - ಮೂರನೆಯ	ತ್ರಯೋವಿಂಶತಿಃ - ಇಪ್ಪತ್ತು ಮೂರು
ಚತ್ವಾರಿ - ನಾಲ್ಕು	ಚತುರ್ಥಃ - ನಾಲ್ಕನೆಯ	ಚತುರ್ವಿಂಶತಿಃ - ಇಪ್ಪತ್ತು ನಾಲ್ಕು
ಪಞ್ಚ - ಐದು	ಪಞ್ಚಮಃ - ಐದನೆಯ	ಪಞ್ಚವಿಂಶತಿಃ - ಇಪ್ಪತ್ತೈದು
ಷಟ್ - ಆರು	ಷಷ್ಠಃ - ಆರನೆಯ	ಷಡ್ವಿಂಶತಿಃ - ಇಪ್ಪತ್ತಾರು
ಸಪ್ತ - ಏಳು	ಸಪ್ತಮಃ - ಏಳನೆಯ	ಸಪ್ತವಿಂಶತಿಃ - ಇಪ್ಪತ್ತೇಳು

ಅಷ್ಟೌ / ಅಷ್ಟ } ಎಂಟು	ಅಷ್ಟಮಃ - ಎಂಟನೆಯ	ಅಷ್ಟಾವಿಂಶತಿಃ - ಇಪ್ಪತ್ತೆಂಟು
ನವ - ಒಂಬತ್ತು	ನವಮಃ - ಒಂಬತ್ತನೆಯ	ಏಕೋನತ್ರಿಂಶತ್ - ಇಪ್ಪತ್ತೊಂಬತ್ತು
ದಶ - ಹತ್ತು	ದಶಮಃ - ಹತ್ತನೆಯ	ತ್ರಿಂಶತ್ - ಮೂವತ್ತು
ಏಕಾದಶ - ಹನ್ನೊಂದು	ಏಕಾದಶಃ - ಹನ್ನೊಂದನೆಯ	ಏಕವಿಂಶಃ - ಇಪ್ಪತ್ತೊಂದನೆಯ
ದ್ವಾದಶ - ಹನ್ನೆರಡು	ದ್ವಾದಶಃ - ಹನ್ನೆರಡನೆಯ	ದ್ವಾವಿಂಶಃ - ಇಪ್ಪತ್ತೆರಡನೆಯ
ತ್ರಯೋದಶ - ಹದಿಮೂರು	ತ್ರಯೋದಶಃ - ಹದಿಮೂರನೆಯ	ತ್ರಯೋವಿಂಶಃ - ಇಪ್ಪತ್ತು ಮೂರನೆಯ
ಚತುರ್ದಶ - ಹದಿನಾಲ್ಕು	ಚತುರ್ದಶಃ - ಹದಿನಾಲ್ಕನೆಯ	ಚತುರ್ವಿಂಶಃ - ಇಪ್ಪತ್ತು ನಾಲ್ಕನೆಯ
ಪಞ್ಚದಶ - ಹದಿನೈದು	ಪಞ್ಚದಶಃ - ಹದಿನೈದನೆಯ	ಪಞ್ಚವಿಂಶಃ - ಇಪ್ಪತ್ತೈದನೆಯ
ಷೋಡಶ - ಹದಿನಾರು	ಷೋಡಶಃ - ಹದಿನಾರನೆಯ	ಷಡ್ವಿಂಶಃ - ಇಪ್ಪತ್ತಾರನೆಯ
ಸಪ್ತದಶ - ಹದಿನೇಳು	ಸಪ್ತದಶಃ - ಹದಿನೇಳನೆಯ	ಸಪ್ತವಿಂಶಃ - ಇಪ್ಪತ್ತೇಳನೆಯ
ಅಷ್ಟಾದಶ - ಹದಿನೆಂಟು	ಅಷ್ಟಾದಶಃ - ಹದಿನೆಂಟನೆಯ	ಅಷ್ಟಾವಿಂಶಃ - ಇಪ್ಪತ್ತೆಂಟನೆಯ
ಏಕೋನವಿಂಶತಿಃ - ಹತ್ತೊಂಬತ್ತು	ಏಕೋನವಿಂಶಃ - ಹತ್ತೊಂಬತ್ತನೆಯ	ಏಕೋನತ್ರಿಂಶಃ - ಇಪ್ಪತ್ತೊಂಬತ್ತನೆಯ
ವಿಂಶತಿಃ - ಇಪ್ಪತ್ತು	ವಿಂಶಃ - ಇಪ್ಪತ್ತನೆಯ	ತ್ರಿಂಶಃ - ಮೂವತ್ತನೆಯ
ಕತಿ - ಎಷ್ಟು?		ವಿಸ್ತಾರಃ - ಅಗಲ
ಬಹು - ಬಹಳ		ಹಸ್ತಃ - ಮೊಳ
ಅನೇಕೇ - ಅನೇಕರು		ಅತೀವ - ಬಹಳವಾಗಿ
ಆಯಾಮಃ - ಉದ್ದ		ಪ್ರಭೂತಮ್ - ಬಹಳವಾದ

ವಿಶೇಷ:- (1) ಸಂಖ್ಯಾಪದಗಳನ್ನು ನಪುಂಸಕಲಿಂಗದಲ್ಲಿ ಕೊಟ್ಟಿದೆ; ಪಞ್ಚ ಎಂಬುದರಿಂದ ಮುಂದೆ ಅಷ್ಟಾದಶ ಎಂಬವರೆಗೆ ಮೂರು ಲಿಂಗಗಳೂ ಆಗುವವು. ಏಕೋನವಿಂಶತಿಃ ಎಂಬುದರಿಂದ ತ್ರಿಂಶತ್ ಎಂಬವರೆಗೆ ಸ್ತ್ರೀಲಿಂಗಗಳು; ಇವು ಏಕವಚನದಲ್ಲಿಯೇ ಬಹುವಚನದ ನಾಮಕ್ಕೆ ವಿಶೇಷಣವಾಗುವವು. ಉದಾ: ಏಕವಿಂಶತಿರ್ಬ್ರಾಹ್ಮಣಾಃ.

(2) ಏಕಃ, ದ್ವೌ, ತ್ರಯಃ, ಚತ್ವಾರಃ - ಇವು ಪುಲ್ಲಿಂಗದ ಸಂಖ್ಯಾ-ವಾಚನಗಳು. ಏಕಾ, ದ್ವೇ, ತಿಸ್ರಃ, ಚತಸ್ರಃ ಇವು ಸ್ತ್ರೀಲಿಂಗದ ಸಂಖ್ಯಾವಾಚಕಗಳು.

೩. ನಾಮವಿಶೇಷಣಗಳು

ಸುಂದರ - ಸೊಗಸಾದ	ವಕ್ರ - ಸೊಟ್ಟಗಿರುವ
ಸ್ಥೂಲ - ದಪ್ಪವಾದ	ಕೃಷ್ಣ - ಕಪ್ಪಾದ
ಸೂಕ್ಷ್ಮ - ತೆಳುವಾದ	ಶುಕ್ಲ - ಬೆಳ್ಳನೆಯ
ಗುರು - ಭಾರವಾದ	ನೀಲ - ನೀಲಿಬಣ್ಣದ
ಲಘು - ಹಗುರವಾದ	ಲೋಹಿತ - ಕೆಂಪಾದ
ವಿದೇಶೀಯ - ಪರದೇಶದ	ಹರಿತ - ಹಸುರಾದ
ಸ್ವದೇಶೀಯ - ತಮ್ಮದೇಶದ	ಕಪಿಶ - ಕಂದುಬಣ್ಣದ
ಶೀತ - ತಣ್ಣಗಿರುವ	ವೃದ್ಧ - ಮುದಿಯಾದ
ಕವೋಷ್ಣ - ಉಗುರುಬೆಚ್ಚನೆಯ	ಮಹಾರ್ಘ- ದೊಡ್ಡ
ಶ್ರಾನ್ತ - ಆಯಾಸಪಟ್ಟ	ಸ್ಥಾಯೀ - ಬಾಳಿಕೆಬರುವ
ದಾನ್ತ - ಸಾಧುವಾದ	ಸ್ಥಾಯಿ - ಬಾಳಿಕೆಬರುವ (ನ)
ಸುಲಭ - ಸುಖವಾಗಿದೊರೆಯುವ	ಕಾರ್ಪಾಸಿಕ - ಹತ್ತಿಯ
ದೃಢ - ಗಟ್ಟಿಯಾದ	ಔರ್ಣ - ಉಣ್ಣೆಯ
ವಿಶಾಲ - ಅಗಲವಾದ	ಜಾತ - ಉಂಟಾದ
ಅಲ್ಪ - ಚಿಕ್ಕದಾದ	ಸಮ್ಪನ್ನ - ಆದ
ಋಜು - ನೆಟ್ಟಗಿರುವ	ವೃತ್ತ - ಆದ, ಆಗಿಹೋದ

ವಿಶೇಷ:- (1) ಅಕಾರಾಂತಶಬ್ದಗಳಿಗೆಲ್ಲ ಸ್ಥೂಲಃ, ಸ್ಥೂಲಾ, ಸ್ಥೂಲಮ್ ಹೀಗೆ ಲಿಂಗಾನುಸಾರ ರೂಪಗಳಾಗುವವು.

(2) ಸುಂದರ, ಗುರು, ಲಘು, ಋಜು - ಇವುಗಳಿಗೆ ಸ್ತ್ರೀಲಿಂಗವು ಸುಂದರೀ, ಗುರ್ವೀ, ಲಘ್ವೀ, ಋಜ್ವೀ - ಎಂದೂ ಆಗಬಹುದು; ಸುಂದರಾ, ಗುರುಃ, ಲಘುಃ, ಋಜುಃ ಎಂದೂ ಆಗಬಹುದು.

೪. ಮನುಷ್ಯರು, ನೆಂಟರು

ಜನಾಃ - ಜನರು
ಪುರುಷಃ - ಗಂಡಸು
ಸ್ತ್ರೀ - ಹೆಂಗಸು
ಸ್ತ್ರಿಯಃ - ಹೆಂಗಸರು
ಬಾಲಃ - ಹುಡುಗ
ವೃದ್ಧಃ - ಮುದುಕ
ಮಿತ್ರಮ್ - ಸ್ನೇಹಿತ (ನ)
ಮಾತಾ - ತಾಯಿ
ಪಿತಾ - ತಂದೆ
ಭ್ರಾತಾ - ಸಹೋದರ, (ಅಣ್ಣ ತಮ್ಮ)
ಭಗಿನೀ - ಸಹೋದರಿ, (ಅಕ್ಕ, ತಂಗಿ)
ಬನ್ಧುಃ - ನೆಂಟ

ಸಖಾ - ಗೆಳೆಯ
ಸಖಾಯಃ - ಗೆಳೆಯರು
ದುಗ್ರಮ್ - ಕಷ್ಟ
ಭದ್ರಮ್ - ಸುಖ
ಕುಶಲಮ್ - ಕ್ಷೇಮ
ಕುಶಲೀ - ಕ್ಷೇಮವಾಗಿರುವವ
ಕುಶಲಿನಃ - ಕ್ಷೇಮವಾಗಿರುವವರು
ಕೇಶಃ - ಕೂದಲು
ಪಾಣೀ - ಕೈಗಳು
ಹಸ್ತಃ - ಕೈ
ಪಾದೌ - ಕಾಲುಗಳು

೫. ಮನೆ

ಗೃಹಸ್ವಾಮೀ - ಮನೆಯ ಯಜಮಾನ
ಗೃಹಮ್ - ಮನೆ
ಕವಾಟಮ್ - ಕದ
ದೀಪಃ - ದೀಪವು
ವಿತರ್ದಿಃ - ಜಗಲಿ
ಕುಡ್ಯಮ್ - ಗೋಡೆ
ಪ್ರಾಕಾರಃ - ಪಾಗಾರದ ಗೋಡೆ, ಕಾಂಪೌಂಡು ಗೋಡೆ
ಪೇಟಿಕಾ - ಪೆಟ್ಟಿಗೆ
ಪಿಟಕಮ್ - ಬುಟ್ಟಿ
ಮೂಲ್ಯಮ್, ಅರ್ಘಃ — ಬೆಲೆ
ದ್ರವಿಣಮ್ - ದ್ರವ್ಯ, ಹಣ

ರೂಪ್ಯಕಮ್ - ರೂಪಾಯಿ
ಆಣಕಃ - ಆಣೆ
ಕೋಷ್ಠಾಗಾರಮ್ - ಉಗ್ರಾಣದಮನೆ
ಅಙ್ಗಣಮ್ - ಅಂಗಳ
ಆದರ್ಶಃ - ಕನ್ನಡಿ
ಚಿತ್ರಮ್ - ಚಿತ್ರಪಟ
ಪಿತ್ತಲಕಲಶಃ - ಹಿತ್ತಾಳೆಯತಂಬಿಗೆ
ಪಾತ್ರಮ್ - ಪಾತ್ರೆ
ಕಟಃ - ಚಾಪೆ
ಪೀಠಮ್ - ಆಸನ, ಮಣೆ ಮುಂತಾದದ್ದು
ಛುರಿಕಾ - ಚಾಕು

೬. ಬಟ್ಟೆ ಮುಂತಾದದ್ದು.

ಕವಚಃ - ಅಂಗಿ
ಕಞ್ಚುಕಃ - ಕುಪ್ಪಸ, ಜುಬ್ಬ
ಉಷ್ಣೀಷಃ - ರುಮ್ಮಾಲು
ಶಿರಸ್ತ್ರಮ್ - ತೋಪಿ
ಕವಚಕೋಶಃ - ಅಂಗಿಯಜೇಬು
ಕಮ್ಬಲಃ - ಕಂಬಳಿ
ಕುವಿನ್ದಃ - ನೇಯ್ಗೆಯುವ

ಶಾಟೀ - ಪಂಚೆ
ಚೇಲಮ್ - ಶಲ್ಯ
ವಸ್ತ್ರಮ್ - ವಸ್ತ್ರ, ಬಟ್ಟೆ
ಪಟಃ - ಬಟ್ಟೆ
ಧೌತವಸ್ತ್ರಾಣಿ - ಒಗೆದ ಬಟ್ಟೆಗಳು
ಸ್ನಾನಶಾಟೀ - ಸ್ನಾನದ ಪಂಚೆ

೭. ಊಟ, ತಿಂಡಿ

ಕ್ಷುಧಿತಃ - ಹಸಿದವನು
ತೃಷಿತಃ - ಬಾಯಾರಿದವನು
ಖಾದ್ಯಮ್ - ತಿಂಡಿ
ಭೋಜನಮ್ - ಊಟ
ಫಲಮ್ - ಹಣ್ಣು
ಕ್ಷೀರಮ್ - ಹಾಲು
ಜಲಮ್ - ನೀರು
ಮೋದಕಃ - ಕಡುಬು

ಶಷ್ಕುಲೀ - ಚಕ್ಕುಲಿ
ಲಾಜಃ - ಅರಳು
ಪೃಥುಕಾಃ - ಅವಲಕ್ಕಿ
ಗುಡಮ್ - ಬೆಲ್ಲ
ರೋಟೀ, ರೋಟಿಕಾ - ರೊಟ್ಟಿ
ಧಾನ್ಯಮ್ - ಧಾನ್ಯ.

೮. ಪ್ರಾಣಿಗಳು

ಅಶ್ವಃ - ಕುದುರೆ
ಗರ್ದಭಃ - ಕತ್ತೆ
ಕುಕ್ಕುರಃ - ನಾಯಿ
ಮಾರ್ಜಾರಃ - ಬೆಕ್ಕು
ಗೌಃ - ಹಸು
ವತ್ಸಃ - ಕರು
ವೃಷಭಃ - ಎತ್ತು
ಮಹಿಷೀ - ಎಮ್ಮೆ
ಮಹಿಷಃ - ಕೋಣ
ಮೇಷಃ - ಟಗರು
ಅಜಾ - ಆಡು
ಕುಕ್ಕುಟಃ - ಹುಂಜ
ಕುಕ್ಕುಟೀ - ಕೋಳಿ
ಪ್ರಾಣೀ - ಪ್ರಾಣಿ
ಪ್ರಾಣಿನಃ - ಪ್ರಾಣಿಗಳು
ಗಾವಃ - ಹಸುಗಳು, ದನಗಳು
ಪುಚ್ಛಮ್ - ಬಾಲ
ಪಕ್ಷಿಣಃ - ಹಕ್ಕಿಗಳು
ನೀಡಮ್ - ಗೂಡು

೯. ಪಾಠಶಾಲೆ

ಅಧ್ಯಾಪಕಃ, ಗುರುಃ - ಹೇಳಿಕೊಡುವವನು, ಮೇಷ್ಟರು
ಛಾತ್ರಃ - ಓದುವವ, ವಿದ್ಯಾರ್ಥಿ
ದಾರುಪೀಠಮ್ - ಮರದ ಬೆಂಚು
ಆಸನ್ದೀ - ಕುರ್ಚಿ
ಲೇಖನಪೀಠಮ್ - ಬರೆಯುವ ಮೇಜು
ಲೇಖನಫಲಕಮ್ - ಬರೆಯುವ ಹಲಗೆ
ಶಿಲಾಫಲಕಮ್ - ಕಲ್ಲು ಹಲಗೆ, ಸ್ಲೇಟು
ಕ್ರೀಡಾಙ್ಗಣಮ್ - ಆಟದಬಯಲು
ಕನ್ದುಕಃ - ಚೆಂಡು
ಕನ್ದುಕಯಷ್ಟಿಃ - ಚೆಂಡುಹೊಡೆಯುವ ಕೋಲು, ದಾಂಡು
ಕಠಿನೀ - ಸೀಮೆಯಸುಣ್ಣ, ಬಳಾಪು
ಶಿಲಾಲೇಖಿನೀ - ಸ್ಲೇಟಿನಬಳಪ
ಸೀಸಕಲೇಖಿನೀ - ಸೀಸಕಡ್ಡಿ
ಲೇಖಿನೀ - ಲೇಖನಿ
ಮಷೀಪಾತ್ರಮ್, ಮಷೀಧಾನೀ - ಮಸಿಯಕುಡಿಕೆ, ದೌತಿ
ಲೇಖನಪತ್ರಿಕಾ - ಬರೆಯುವಕಾಗದ
ಲಿಪಿಃ - ಬರೆವಣಿಗೆ
ಶಾದ್ವಲಃ - ಹುಲ್ಲುಗಾವಲು
ಘಾಸಃ - ಹುಲ್ಲು
ವೃಕ್ಷಃ - ಮರ
ಸ್ಕನ್ಧಃ - ಬುಡ

ದಣ್ಡಃ - ಕೋಲು
ಖೇಲನಮ್ - ಆಟ
ಕೋಲಾಹಲಃ - ಗದ್ದಲ
ಶಾಖಾ - ಕೊಂಬೆ
ಪರ್ಣಮ್ - ಎಲೆ
ವಾಲುಕಾ - ಮರಳು

೧೦. ಕಾಲ

ಪ್ರಾತಃ - ಬೆಳಗ್ಗೆ
ಸಾಯಮ್ -ಸಂಜೆ
ವಾಸರಃ - ವಾರ
ದಿವಸಃ - ದಿನ
ಸಪ್ತಾಹಃ - ಏಳುದಿನ, ವಾರ
ಅದ್ಯ - ಈದಿನ
ಹ್ಯಃ - ನಿನ್ನೆ
ಶ್ವಃ - ನಾಳೆ
ಪರಶ್ವಃ - ನಾಡಿದ್ದು
ಅದ್ಯ ಯಾವತ್ - ಈವರೆಗೆ
ಅತಃ ಪರಮ್ - ಇನ್ನು ಮೇಲೆ
ಪ್ರತ್ಯೂಷಃ - ಅರುಣೋದಯ
ಮಾಸಃ - ತಿಂಗಳು
ವತ್ಸರಃ - ವರ್ಷ

ಅಹೋರಾತ್ರಃ - ದಿನ
ಅಧುನಾ, ಇದಾನೀಮ್ - ಈಗ
ಅನನ್ತರಮ್, ಪಶ್ಚಾತ್ - ಆಮೇಲೆ
ತದಾನೀಮ್ - ಆಗ
ಕದಾ - ಯಾವಾಗ?
ಮಾಸೇನ - ತಿಂಗಳೊಳಗಾಗಿ
ಪುನಃ - ಮತ್ತೆ
ಅಚಿರೇಣ - ಬೇಗನೆ
ಪ್ರತಿದಿನಮ್ - ದಿನದಿನವೂ
ಸದಾ - ಯಾವಾಗಲೂ
ಶೀಘ್ರಮ್ - ಬೇಗ

೧೧. ಸ್ಥಾನ, ದಿಕ್ಕು

ಅತ್ರ - ಇಲ್ಲಿ
ತತ್ರ - ಅಲ್ಲಿ
ಕುತ್ರ - ಎಲ್ಲಿ?
ಸಮೀಪಮ್ - ಹತ್ತಿರ
ಕುತಃ - ಎಲ್ಲಿಂದ?
ಸರ್ವತ್ರ - ಎಲ್ಲೆಲ್ಲಿಯೂ

ಬಹಿಃ - ಹೊರಗೆ
ಅನ್ತಃ - ಒಳಗೆ
ಇತಃ - ಇತ್ತ
ಉಪರಿ - ಮೇಲೆ
ಪುರತಃ - ಮುಂದೆ
ಸವ್ಯತಃ - ಎಡಕ್ಕೆ
ದಕ್ಷಿಣತಃ - ಬಲಕ್ಕೆ
ಆಕಾಶಃ - ಆಕಾಶವು
ನಕ್ಷತ್ರಮ್ - ನಕ್ಷತ್ರ
ಭಾನುಃ - ಸೂರ್ಯ
ಚನ್ದ್ರಃ - ಚಂದ್ರ
ಕೌಮುದೀ - ಬೆಳದಿಂಗಳು
ತಮಃ - ಕತ್ತಲೆ

೧೨. ಕ್ರಿಯೆಗಳು

ಪಠತಿ ಎಂಬ ಕ್ರಿಯಾಪದದಂತೆ (39ನೇ ಪುಟವನ್ನು ನೋಡಿ) ರೂಪಗಳನ್ನು ಪಡೆಯುವ ಮಾತುಗಳು.

ಪಾಠಯ - ಓದಿಸು
ನೃತ್ಯ - ಕುಣಿ
ಲಿಖ - ಬರೆ
ಪೃಚ್ಛ - ಕೇಳು
ಕಥಯ - ಹೇಳು
ಗಚ್ಛ - ಹೋಗು
ಆಗಚ್ಛ - ಬಾ
ನಿರ್ಗಚ್ಛ - ಹೊರಗೆ ಬಾ
ಆಹ್ವಯ - ಕರೆ
ಕ್ರನ್ದ - ಕೂಗಿಕರೆ
ಉದ್ಘಾಟಯ - ತೆಗೆ
ಪ್ರವಿಶ - ಒಳಕ್ಕೆ ಬಾ
ಉಪವಿಶ - ಕೂತುಕೊ
ಧಾರಯ - ಧರಿಸು, ಹಿಡಿದು ಕೊಂಡಿರು
ಚಲ - ಅಲ್ಲಾಡು
ಸಞ್ಚರ - ಓಡಾಡು
ಚಾರಯ - ಮೇಯಿಸು
ಭಷ - ಬೊಗಳು
ನರ್ದ - ಗುಟರುಹಾಕು
ಕ್ರೀಡ - ಆಟವಾಡು
ಕೂಜ - (ಹಕ್ಕಿಗಳಂತೆ) ಕೂಗು
ಸಲ್ಲಾಪ - ಸಂಭಾಷಣೆಮಾಡು
ಪ್ರಕ್ಷಾಲಯ - ತೊಳೆ
ವಯ - ನೇಯು
ಭೀಷಯ - ಹೆದರಿಸು

ಭಕ್ಷಯ - ತಿನ್ನು
ಖಾದ - ತಿನ್ನು
ಪಿಬ - ಕುಡಿ
ವಾಞ್ಛ - ಅಪೇಕ್ಷಿಸು
ತಿಷ್ಠ - ನಿಲ್ಲು
ಉತ್ತಿಷ್ಠ - ಏಳು
ಧಾವ - ಓಡು
ನಯ - ತೆಗೆದುಕೊಂಡುಹೋಗು
ಆನಯ - ತೆಗೆದುಕೊಂಡುಬಾ
ಆವಹ - ಉಂಟುಮಾಡು.
ಆರೋಹ - ಹತ್ತು
ವಿಶೋಧಯ - ತೊಳೆ
ಪಶ್ಯ - ನೋಡು
ಚಾಲಯ - ಅಲ್ಲಾಡಿಸು
ಸನ್ತರ್ಜಯ - ಗದರಿಸು
ಭವ - ಆಗು
ಗಣಯ - ಎಣಿಸು
ದಶ - ಕಡಿ, ಕಚ್ಚು
ತಾಡಯ - ಹೊಡೆ
ಘಟ್ಟಯ - ಬಡಿ
ಪ್ರಣಮ - ನಮಸ್ಕರಿಸು
ಮೂರ್ಖ - ಹಬ್ಬು
ಪ್ರಸರ - ಹರಡು
ಪ್ರಜ್ವಲ - ಉರಿ
ಅಭ್ಯಸ್ಯ - ಅಭ್ಯಾಸಮಾಡು
ತರ - ದಾಟು
ನನ್ದ - ಸಂತೋಷಪಡು

ವರ್ತತೇ ಎಂಬ ಕ್ರಿಯಾಪದದಂತೆ ರೂಪವನ್ನು ಪಡೆಯುವ ಮಾತುಗಳು.

ಅಭಿವಾದಯತೇ - ನಮಸ್ಕರಿಸುತ್ತಾನೆ
ವಿದ್ಯತೇ - ಇದ್ದಾನೆ
ಹೇಷತೇ - ಕೆನೆಯುತ್ತದೆ
ವರ್ತತೇ - ಇದೆ
ವಿದ್ಯತೇ - ಇದೆ
ಅವಲೋಕತೇ - ನೋಡುತ್ತದೆ
ವೀಕ್ಷತೇ - ನೋಡುತ್ತದೆ
ವಿರಾಜತೇ - ಹೊಳೆಯುತ್ತದೆ
ಉಚ್ಯತೇ - ಎನ್ನಲ್ಪಡುತ್ತದೆ
ಕಥ್ಯತೇ - ಹೇಳಲ್ಪಡುತ್ತದೆ
ಸಙ್ಗಚ್ಛನ್ತೇ - ಸೇರುತ್ತದೆ
ರೋಚತೇ - ಇಷ್ಟವಾಗುತ್ತದೆ, ಸೇರುತ್ತದೆ
ಶಿಷ್ಯತೇ - ಉಳಿಯುತ್ತದೆ
ಪಲಾಯತೇ - ಓಡುತ್ತದೆ
ನಿವರ್ತತೇ - ಹಿಂತಿರುಗುತ್ತದೆ
ಭಜತೇ - ಹೊಂದುತ್ತದೆ

ಸಂಸ್ಕೃತಭಾಷಾಭ್ಯಾಸ ಗ್ರಂಥಮಾಲಾ

1. ಸಂಸ್ಕೃತಭಾಷಾಭ್ಯಾಸ – ಒಂದನೆಯ ಭಾಗ: ಇದರಲ್ಲಿ ಅಕ್ಷರಗಳ ಪರಿಚಯ, ಅ ಆ ಕಾರಾಂತನಾಮಗಳು, ವಿಶೇಷಗಳು, ತಕಾರಾಂತ ನಕಾರಾಂತ ನಾಮಗಳು, ಅಸ್ಮದ್, ಯುಷ್ಮದ್, ತತ್–ಸರ್ವ–ಈ ಸರ್ವನಾಮಗಳು, ಭೂತಕೃದಂತಗಳು – ಇವು ಮನದಟ್ಟಾಗುವಂತೆ ಸಣ್ಣಸಣ್ಣ ವಾಕ್ಯಗಳನ್ನು ಕನ್ನಡದ ಅರ್ಥದೊಡನೆ ಕೊಟ್ಟು ಅದೇ ಪದಗಳಿರುವ ಬೇರೆಬೇರೆಯ ವಾಕ್ಯಗಳನ್ನು ಏರ್ಪಡಿಸುವದನ್ನು ಕಲಿಸಿರುತ್ತದೆ. ಕನ್ನಡ ವಾಕ್ಯಗಳ ಅಭ್ಯಾಸಗಳಿಗೆಲ್ಲ ಸಂಸ್ಕೃತದ ಅನುವಾದವು ಪುಸ್ತಕದಲ್ಲೇ ಸಿಕ್ಕುತ್ತಿದ್ದರೂ ವಿದ್ಯಾರ್ಥಿಗಳು ಸ್ವಬುದ್ಧಿಯನ್ನುಪಯೋಗಿಸುವದಕ್ಕೆ ಅವಕಾಶವನ್ನೂ ಕಲ್ಪಿಸಿದೆ.

(ಆರನೆಯ ಮುದ್ರಣ: 2004) ಡೆಮ್ಮಿ 1/8, ಪು. 82

2. ಸಂಸ್ಕೃತಭಾಷಾಭ್ಯಾಸ – ಎರಡನೆಯ ಭಾಗ: ಎರಡನೆಯ ಭಾಗ– ಒಂದನೆಯ ಭಾಗದ ವಿಷಯಗಳನ್ನು ಹಿಗ್ಗಿಸಿ ಮುಖ್ಯವಾದ ಸ್ವರಾಂತ ಮತ್ತು ವ್ಯಂಜನಾಂತಶಬ್ದದ ರೂಪಗಳನ್ನೂ ಕ್ರಿಯಾಪದದ ವರ್ತಮಾನಕಾಲ, ಅನದ್ಯತನಭೂತ, ಆಜ್ಞಾರ್ಥ್ಯರ್ಥ, ವಿಧ್ಯಾದ್ಯರ್ಥ – ಈ ರೂಪಗಳನ್ನೂ ಕೃದಂತಗಳ ಮತ್ತು ಮುಖ್ಯವಾದ ಅವ್ಯಯಗಳ ರೂಪಗಳನ್ನೂ ಬಳಸಿಕೊಂಡು ವಾಕ್ಯಗಳ ಮತ್ತು (ಕಥೆಗಳ) ವಾಕ್ಯಬೃಂದಗಳ ರೂಪದಲ್ಲಿ ಬಹು ಸುಲಭವಾದ ಮಾರ್ಗದಲ್ಲಿ ಭಾಷಾಭ್ಯಾಸವನ್ನು ಮಾಡುವಂತೆ ಏರ್ಪಡಿಸಿದೆ. ಅವ್ಯಯಗಳನ್ನು ಉಪಯೋಗಿಸುವ ವಿಧಾನಗಳನ್ನೂ ತಿಳಿಸಿದೆ.

(ಐದನೆಯ ಮುದ್ರಣ: 2007) ಡೆಮ್ಮಿ 1/8, ಪು. 157

3. ಸಂಸ್ಕೃತಭಾಷಾಭ್ಯಾಸ – ಮೂರನೆಯ ಭಾಗ: ಇದರಲ್ಲಿ ಪಂಚತಂತ್ರ–ಮಿತ್ರಭೇದದ ಕಥೆಯನ್ನು (ಉಪಕಥೆಗಳನ್ನು ಬಿಟ್ಟು) ಸಂಗ್ರಹಿಸಿಕೊಡಲಾಗಿದೆ. ಇದನ್ನು ಚಿಂತನೆ ಮಾಡುವ ಕ್ರಮವನ್ನು ತಿಳಿಸಿದೆ. ಹತ್ತು ಗಣಗಳ ಕೆಲವು ಮುಖ್ಯವಾದ ಧಾತುಗಳಿಗೆ ವರ್ತಮಾನ, ಅನದ್ಯತನ, ಆಜ್ಞಾರ್ಥ, ವಿಧ್ಯಾದ್ಯರ್ಥ, ಪರೋಕ್ಷಭೂತ, ಭವಿಷ್ಯತ್ಕಾಲಗಳು – ಇಷ್ಟು ರೂಪಗಳನ್ನು ಬಳಸುವ ಕ್ರಮಗಳನ್ನು ಕೊಟ್ಟಿದೆ. ಕೃದಂತಗಳ ಉಪಯೋಗವನ್ನು ತಿಳಿಸಿದೆ. ಮುಖ್ಯಸಮಾಸಗಳಿಗೆ ವಿಗ್ರಹವಾಕ್ಯಗಳನ್ನು ಹೇಳುವ ಕ್ರಮವನ್ನು ವಿವರಿಸಲಾಗಿದೆ.

(ಮೂರನೆಯ ಮುದ್ರಣ: 2009) ಡೆಮ್ಮಿ 1/8, ಪು. 184

> ಭಾರತದ ಹಿಂದಿನ ಸಂಸ್ಕೃತಿಗೂ ಇಂದಿನ ಸಂಸ್ಕೃತಿಗೂ ಸಂಬಂಧವನ್ನು ತೋರಿಸುವ ಭಾಷೆ ಎಂದರೆ ಸಂಸ್ಕೃತವೊಂದೇ. ಬೇರಿಗೂ ಕೊಂಬೆಗಳಿಗೂ ಸಂಬಂಧವನ್ನು ಮಾಡಿಕೊಟ್ಟಿರುವ ಮರದಬುಡವು ಹೇಗೋ ಹಾಗೆ ಸಂಸ್ಕೃತವು ನಮ್ಮಗಳ ಹಿಂದಿನ–ಈಗಿನ–ಮುಂದಿನ ಸಂಸ್ಕೃತಿಯ ಬೆಳವಣಿಗೆಗೆ ಹೊಂದುಗಡೆಯನ್ನು ಮಾಡುತ್ತಾ ಹೋಗುತ್ತಿರುವದು. ಈ ಭಾಷೆಯನ್ನು ತಮ್ಮತಮ್ಮ ದೇಶ ಭಾಷೆಯಲ್ಲೇ ಈಗಲೂ ಕೆಲವರು ಸಹಾಯಕವಾಗಿ ಕಲಿಯುತ್ತಿದಾರೆ. ಹೌದೊ, ಅಲ್ಲವೊ–ನಿಮ್ಮಲ್ಲೇ ನೀವು ಆಲೋಚಿಸಿರಿ.

ವಿಶೇಷ ಸೂಚನೆ: ಸ್ವಯಂಬೋಧಿನೀ ಮತ್ತು ಸಂಸ್ಕೃತಭಾಷಾಭ್ಯಾಸ ಗ್ರಂಥಮಾಲೆಯ ಐದೂ ಪುಸ್ತಕಗಳನ್ನು ಒಟ್ಟಿಗೆ ಕೊಳ್ಳುವವರಿಗೆ ವಿಶೇಷ ರಿಯಾಯಿತಿಯನ್ನು ನೀಡಲಾಗುವುದು.

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀಶಂಕರಭಗವತ್ಪಾದರದು. ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು – ವೈ. ಸುಬ್ಬರಾಯರು, ಜನನ 5–1–1880) ಶ್ರೀಶಂಕರರ ವೇದಾಂತಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬೆಳಸಿ, ಶಂಕರರ ಅಮೋಘವಾದ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು, ಶಾಂಕರವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತವಕ್ತಾರರಾದರು, 'ಅಭಿನವಶಂಕರ'ರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96 ನೇ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು, 'ಪುರುಷ ಸರಸ್ವತಿ' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಲಿ ಮಹಾರಾಜರಲ್ಲಿ ಶ್ರೀ ರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದರು. ಶುದ್ಧ ತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮ ಪ್ರಕಾಶಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾ ಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.ಇಂದಿಗೂ ಚೈತನ್ಯ ಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

28–7–2008ರಂದು ಪ್ರತಿಷ್ಠೆಗೊಂಡ ಶ್ರೀಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।

ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥